85/4

SUPPLEMENT TO THIS ISSUE. (ಈ ಸಂಚಿಕೆಯ ಪುರವಣಿ)

CHANDRABHAN & CO.,

Post Box 216, G. P. O. Madras.

ಇದರಲ್ಲಿರುವ ಸಾಮಾನುಗಳು ಬೇಕಾದರೆ ನಮ್ಮ ವಿಳಾಸಕ್ಕೆ ಬರೆದು ವೀ ಪಿ ಪೋಸ್ಟು ಮೂಲಕ ತರಿಸಿಕೊಳ್ಳಬಹುದು ಇದ್ದಲ್ಲದೆ ನಮ್ಮ ಕಂಪೆನಿಯಲ್ಲಿ ಹಾರ್ಮೋನಿಯಂ ಗ್ಯಾಸ್‌ದೀಪ, ಸೈಕಲ್ ಮುಂತಾದವುಗಳು ದೊರಿಯುತ್ತೆ

Sale !

Portable GRAMAPHONE

ಗ್ರಾಮು ಫೋನ್

Sale !!

Original Price 14—0—0

ಅರ್ಧ ಕ್ರಯ ಮಾರಾಟ !

ಮೊದಲಿನ ಕ್ರಯ ರೂ 14—0—0

Sale Price 7—0—0

ಬೇಗನೆ ತರಿಸಿಕೊಳ್ಳಿ !!

ಈಗಿನ ಕ್ರಯ ರೂ. 7—0—0

ಈ ಯಂತ್ರಗಳು ನೋಟಕ್ಕೆ ಲಕ್ಷಣವಾಗಿರುವಂತೆಯೂ ಕ್ರಯದಲ್ಲಿ ಸುಲಭವಾಗಿಯೂ, ಇರುವಂಥ ಬಹು ಬಲಿಷ್ಟವಾದ ಸಾಮಾನುಗಳಿಂದ ಈ ಯಂತ್ರವನ್ನು ತಯಾರಿಸಿದೆ. ಇಂಗ್ಲೀಷ್, ಕನ್ನಡ, ಹಿಂದುಸ್ಥಾನಿ ಮುಂತಾದ ಬಾಷೆಗಳಲ್ಲಿ [ರಿಕಾರ್ಡು] ಪದಗಳನ್ನು ಹೇಳುವದೂ, ಲಗ್ನದಮನೆ, ನಾಟಕಶಾಲೆ, ಮುಂತಾದ ಶುಭದಿವಸಗಳಲ್ಲಿ ಉಪಯೋಗಿಸಲು ಬಹು ಜೋರ್ನಾಗಿರುವದು ಸುಂದರವಾದ ಪದ ಹೇಳುವ ವಿಹಾರನ್ Horn ಎಂಬ ಕೊಳವೆ ಇದೆ ನಿಧಾನವಾಗಿಯೂ, ಜಾಗ್ರತೆಯಾಗಿಯೂ ಪದ ಹೇಳಿಸಲು **Fast and Slow Regulator** ಕೀಲು ಇದೆ ಈ ಯಂತ್ರವನ್ನು ಎಲ್ಲಿ ಬೇಕಾದರೂ ಕೈಯಲ್ಲಿ ಹಿಡಿದುಕ್ಕೊಂಡು ಹೋಗಲು ಅನುಕೂಲವಾದಂಥ ಸುಂದರವಾದ ಕೈಪೆಟ್ಟಿಯಲ್ಲಿಟ್ಟಿದೆ ಇಂಥಾದ ನಾವು ಸ್ಥ ಗ್ರಾಮೋಫೋನ್ ಪೆಟ್ಟಿಗಳು ಇಷ್ಟು ಸುಲಭ ಅರ್ಧ ಕ್ರಯಕ್ಕೆ ಮುತ್ತೆಲ್ಲಿಯೂ ಕೊರೆಯುಲಾರದು ಎರಡು ಕಡೆಯುಂ ಪದ ವಿರುವ ಒಂದು ರಿಕಾರ್ಡ್, ಸೂಜಿಪೆಟ್ಟಿಗೆ, ಮತ್ತು ಯಂತ್ರ ಸಹಿತ Complete ಕ್ರಯ ರೂ **7—0—0** ಟಪಾಲ್ ಖರ್ಚು, ಪ್ರತ್ಯೇಕ ರೂ **1—8—0 Postage & Packing Extra** R 1—8—0 ಯಾವಜಾಪ್ತಿಯಲ್ಲಿಯೂ ರಿಕಾರ್ಡ್ ದೊರಿಯುತ್ತದೆ

ಪ್ರತ್ಯೇಕ ರಿಕಾರ್ಡ್ ಬೇಕಾದರೆ ರಿಕಾರ್ಡ್ 1ಕ್ಕೆ ಕ್ರಯ ರೂ **1—12—0**

ಪ್ರೆಂಚ್ ಸೆಂಟ್ ಎಂಬ ಸುಗಂಧ ದ್ರವ್ಯವು.

ಇದು ಪುಷ್ಪಗಳ ಸಾರದಿಂದ ತಯಾರಾದದ್ದು ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಅಥವಾ ಕೈವಸ್ತ್ರಗಳಿಗೆ ಹಾಕಿದರೆ ಒಂದು ವಾರದವರಿವಿಗೂ ವಾಸನೆ ಹೋಗದೆ ಒಂದೇಸರಿಯಾಗಿ ಘಮಘಮಿಸುತ್ತಿರುವದು ಮತ್ತು ಇದರ ವಾಸನೆಯನ್ನು ಕಂಡವರ ಮನಸ್ಸೆಲ್ಲವೂ ಇದರ ಮೇಲೆಯೇ ಸೆಳೆಯುವಷ್ಟು ಮನೋಹರವಾದ ಸುವಾಸನೆಯನ್ನು ಕೊಡುವದು ಇದರ ವಾಸನೆಯು ಪು

ರುಷರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ

ಬಾಟ್ಲಿ 1ಕ್ಕೆ ರೂ **2—0—0**

ಹೇರ್ ಡೆಸ್ಟ್ರಾಯರ್ ಎಂಬ ರೋಮನಾಶಕ ಕ್ರೀಂ

ಈ ಹೊಸ ಜರ್ಮನ್ ರೋಮನಾಸಕ ಕ್ರೀಂ ಎಂಬುವದು ಶರೀರದೊಳಗಿನ ಯಾವಭಾಗದಲ್ಲಿಯಾದರೂ ಪ್ರಯೋಗಿಸಿದರೆ ಅದು ಸವಿಲ್ಲದೆ ದುರ್ವಾಸನೆಯಿಲ್ಲದೆ, ನೋವಿಲ್ಲದೆ ಚರ್ಮದ ಮೇಲೆ ಯಾವತರದ ಕಲೆಯನ್ನು ಉಂಟುಮಾಡದೆ ಸುಲಭವಾಗಿ ಒಂದೇ ನಿಮಿಷದಲ್ಲಿ ಕೂದಲನ್ನು ತೆಗೆಯುವದು ಇದರಿಂದ ಚರ್ಮಕ್ಕೆ ಕಾಂತಿಯೂ ಉಂಟಾಗುವುದು ಉಪಯೋಗಿಸುವ ವಿಧಾನವನ್ನು ಬಾಟ್ಲಿ ಸೆಂಗಡೆ ಕಳುಹಿಸುವೆವು ಪ್ರೆಂಚ್ ಲಂಡನ್ ದೇಶಗಳಲ್ಲಿ ಇದನ್ನು ಬಹಳ ಉಪಯೋಗಿಸುತ್ತಾರೆ ಕ್ಷೌರಿಕನಹತ್ತರ ಹೋಗುವ ಕೆಲಸವಿಲ್ಲ ಒಂದು ಬಾಟ್ಲಿ ಬಹಳ ದಿವಸಗಳು ಬರುವದು

ಕ್ರಯ ಅಂದವಾದ ಬಾಟ್ಲಿ ರೂ **1—8—0**

ಬರ್ತ್ ಕಂಟ್ರೋಲ್ ಟಾಬಲೆಟ್ಸ್ ಎಂಬ ಸಂತತಿ ಪ್ರತಿಬಂಧಕ ಗುಳಿಗೆಗಳು.

ದೊಡ್ಡ ಡಾಕ್ಟರಗಳಿಂದ ಪರೀಕ್ಷಿಸಿ ಕಿಪಾರಸ್ ಮಾಡಲ್ಪಟ್ಟಿದೆ ಬಹಳ ಸಾರಿ ಹಡೆಯುವದರಿಂದ ಹೆಂಗಸರಿಗೆ ಅಶಕ್ತಿಯಾಗುತ್ತದೆ ಬಡತನದಲ್ಲಿ ಮಕ್ಕಳಾಗುವದರಿಂದ ದುಃಖವಾಗುತ್ತದೆ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬೇಡವೆಂದು ಇಚ್ಛಿಸುವವರು ಈ ಗುಳಿಗೆಯನ್ನು ಉಪಯೋಗಿಸಬೇಕು ಇದರಿಂದ ಮುಟ್ಟಿಗುವಿಕೆಯು ನೇಮದಂತೆ ಸುರುವಿರುವದು ಆದರೆ ಗರ್ಭ ಧರಿಸುವದಿಲ್ಲ ಶರೀರಕ್ಕೆ ಏನು ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿರುತ್ತದೆ ಗರ್ಭಧಾರಣೆ ಬಂದಾಗುವದು ಅನುಪಾನ ಪತ್ರಿಕೆ ಔಷಧ ಜೊತೆಯಲ್ಲಿ ಇರುತ್ತದೆ

ಬಾಟ್ಲಿ ಕ್ರಯ ರೂ **2—0—0**

ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿ ವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವ ನೀರಿನಲ್ಲಿ ತೆಗದುಕೊಳ್ಳಿಬೇಕು ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವದು ಔಷಧವನ್ನು ತಿಂದು ಗಂಟಕಾಲ ತಡದು ಸ್ತ್ರೀ ಸುಖ ಮಾಡಿದರೆ ಬೇಗನೆ ಸ್ಖಲನವಾಗದೆ ಶಕ್ತಿಯನ್ನು ಆನಂದವನ್ನು ಕೊಡುವದು ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ ಈ ಮಾತ್ರೆಗಳಿಗೆ ಬೆಳ್ಳಿ, ಭಂಗಾರ, ತಾಂಬ್ರ ಬಸ್ಮವು ಎಷ್ಟು ಪಾತ್ರವು ಸಮಾನವಾಗಿರುತ್ತದೆ ಇದೂ ಅಲ್ಲದೆ ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೆ ಸ್ಖಲನವಾದರೂ ಮೂರೇ ದಿವಸದಲ್ಲಿ ನಿಲ್ಲಿಸುವದು ಎಲ್ಲರೂ ಸೇವಿಸಬಹುದು

ಡಬ್ಬಿ 1ಕ್ಕೆ ಕ್ರಯ ರೂ **1—8—0**

ಲಿನಿಮೆಂಟ್ ಆಯಿಂಟ್‌ಮೆಂಟ್ ಎಂಬ ನಪುಂಸಕತ್ವಹರಿ ತೈಲವು

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು ಮನುಷ್ಯರ ದೂಷಿತ ವೀರ್ಯವು ಗರ್ಭಕಾರಕವಾಗಲಾರದು ಅತ್ಯಂತ ಮೈಥುನದಿಂದಲೂ ಪ್ರಾಮುಖ್ಯವು (ಕಸರತ್‌ದಿಂದಲೂ ಯಾವಾಗ್ಲೂ ಕೂತುಕೊಂಡೇ ಇರುವದರಿಂದಲೂ, ಹಸ್ತಪ್ರಯೋಗಾದಿಗಳಿಂದಲೂ, ಸ್ತ್ರೀ ಸಂ ವ್ಯಾಧಿಯಿಂದಲೂ, ಪ್ರಾಯ ಜಾಸ್ತಿ ಆದರಿಂದಲೂ ಎಲ್ಲಾ ನಾಡಿಗಳೂ ಬಲಹೀನವಾಗುವದರಿಂದ ಬಲಹೀನವಾಗಿ ಸ್ತ್ರೀ ಸಂಗ ಮಾಡುವದ ಕೆಲವರು ಬಾಲ್ಯದಲ್ಲಿಯೂ ಹೈದಾಪ [ಮ ಯೂ ಇಂಥಾ ವ್ಯಾಧಿಗಳನ್ನು ಉಂ ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಯಿಂದ ವ್ಯಾಧಿಯನ್ನು ಹೆಚ್ಚು ಮಾಡಿಕ್ಕೊಂಡು ಪ್ರಾಯ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಜನಾಭಗ್ನ ಯನ್ನುಂಟು ಮಾಡಿಕೊಳ್ಳುವವರು ಇಂಥವರ ಉಪಯೋ ಇಂಗ್ಲೀಷ್ ಡಾಕ್ಟರುಗಳಿಂದ ಈ ತೈಲವನ್ನು ತೆಗ ಎಣ್ಣೆಯನ್ನು ಮೇಲೆ ಪುರಷಾಂಗಕ್ಕೆ 4 ದಿನಗಳು ವಾಗುವದು ಮತ್ತು ಲಿಂಗವು ದೊಡ್ಡದಾಗಿ ಉಪಯೋಗಿಸುವ ವಿಧ ಬಾಟ್ಲಿ ಜೊತೆಯಲ್ಲಿದೆ

ಕ್ರಯ ಸೀಸೆ 1ಕ್ಕೆ ರೂ 1—

ವಿಳಾಸ;— ಚಂದ್ರಭಾನ್ ಅಂಡ್ ಕಂಪೆನಿ, ಪೋಸ್ಟು ಬಾಕ್ಸ್ ನಂ 216 ಮದರಾ

Supplement to this issue. (ಈ ಸಂಚಿಕೆಯ ಪುರವಣಿಪತ್ರ)

ಅರಹಾಡ ಪುಸ್ತಕ ! ಕನ್ನಡ ಭಾಷೆಯಲ್ಲಿ !! ಅಂದವಾದ ಮುದ್ರಣ !!!

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ತಿಳಿಸುವ

ರತಿ ಮನ್ಮಥ ರಹಸ್ಯ ಎಂಬ ಮರ್ಮ ಶಾಸ್ತ್ರ.

ಕ್ರಯ ರೂ 1 0 0



ಈ ಪುಸ್ತಕವು ಫ್ರೆಂಚ್, ಪರ್ಷಿಯನ್ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ಇದನ್ನು ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯಲ್ಲಿ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ ಲೇಡಿ ಫೋಟೋಗಳ ಸಹಿತ ತಳಿಸುವ ಕಾಗದದಲ್ಲಿ ಅಂದವಾಗಿ ಮುದ್ರಿಸಿರುತ್ತೇವೆ ಇದರಲ್ಲಿ ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿನ್ ವೇಶ್ಯ ಸ್ತ್ರೀಯರ ಪ್ರೀತಿಯ ಮರ್ಮಗಳು, ಮಳಿಯಾಳ, ಜಪಾನ್, ಅಂಡಮಾನ್, ಸಿಲೋನ್, ಆಫ್ರಿಕನ್, ಚೈನಾ ಮೊದಲಾದ ದೇಶಗಳ ಹೆಂಗಸರು ಪ್ರೀತಿಸುವ ಮರ್ಮಗಳು ಜಪಾನ್‌ದೇಶದ ಮಲಗುವಮನೆಯಲ್ಲಿ ಪ್ರೀತಿಸುವ ರಹಸ್ಯಗಳು, ಗೇಷಿಯಾಕನ್ಯೆಗಳು ಮೋಹಿಸುವ ಉಪಾಯಗಳು, ಸಂಯೋಗದಶಾ, ಸ್ತ್ರೀಯರ ದೇಹ ಸೌಂದರ್ಯದ ವರ್ಣನೆ, ಕನ್ಯೆಗಳ ಪ್ರೇಮ, ಹಾಸಿಗೆಯ ಸುಖವಿಲಾಸಗಳು, ಜಪಾನ್ ದೇಶದ ವ್ಯಭಿಚಾರಿಗಳ ಅದ್ಭುತ ವಿನೋದಗಳು, ಹೆಬ್ರಿಡೆನ್ ಎಂಬ ಜಾತಿಯ ಪುರುಷರ ಆಶ್ಚರ್ಯ ಗುಟ್ಟುಗಳು, ದಕ್ಷಿಣಸಮುದ್ರದ್ವೀಪಗಳಲ್ಲಿ ವಾಸಮಾಡುವ ಹೆಂಗಸರ ಗುಣಗಳು ಜೈನಾದೇಶಸ್ತ್ರೀಕಾಲುಗಳನ್ನು ಅಂದವಾಗಿ ಇಟ್ಟಿರುವ ಮರ್ಮಗಳು ಲಾಫ್‌ಲಾಂಡ್ ದೇಶದ ದಂಪತಿಗಳ ಪ್ರೀತಿಯ ಸುಖಗಳು, ಶಿಶು ಉತ್ಪತ್ತಿವಿಧಿ, ಗುಪ್ತವೈದ್ಯಗಳು ಜರ್ಮನಿ ದೇಶದ ಒಂದು ಸಂಘದಲ್ಲಿ ಸ್ತ್ರೀಪುರುಷರು ದಿಗಂಬರವಾಗಿರುವ ವಿಷಯ ನಾಗಾ ದೇಶದ ಸ್ತ್ರೀಯರ ಸಂಕೋಚಗಳು ಶರೀರದಲ್ಲಿರುವ ಅವಯವಗಳ ವಿವರ, ಇನ್ನೂ ಅನೇಕ ಸ್ತ್ರೀ ಪುರುಷರ ಪ್ರೀತಿಯೂ ಲೀಲಾ ವಿನೋದಗಳು ಫೋಟೋಗಳ ಸಹಿತ ಮುದ್ದಾಗಿ ಪ್ರಿಂಟಾಗಿದೆ. ಇದರಲ್ಲಿರುವ ಫೋಟೋಗಳನ್ನು ನೋಡುತ್ತಾ ಕೂತರೆ ಪುಸ್ತಕ ಮುಗಿಯುವವರೆಗೂ ಮೇಲಕ್ಕೆಳಲೂ ಮನಸುಬಾರದು ಈ ಶೃಂಗಾರವಾದ ಪುಸ್ತಕವು ಕನ್ನಡಭಾಷೆಯಲ್ಲಿ ತಯಾರಾಗಿದೆ ಇದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ ಕ್ರಯ ರೂ 1

ವಿಲಾಸ;— ಚಂದ್ರಭಾನ್ ಅಂಡ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. 216, ಮದರಾಸು

ಇಂಗ್ಲೀಷ್ ಡಾಕ್ಟರುಗಳು ಮೃಧುವಾದ ರಬ್ಬರಿನಲ್ಲಿ
ತಯಾರಿಸಲ್ಪಟ್ಟ ಸುಖಾನಂದ ಎಂಬ
ಮರ್ಮದ ಚೀಲವು

ಈ ಪ್ರಪಂಚದಲ್ಲಿ ಅನೇಕರು ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟೂಕಿ, ಪಕ್ಕ, ಮುಸುಕು, ಬಿಳುಪು, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು ಇಂಥಾವರು ಎಷ್ಟು ಹಣವನ್ನು ಖರ್ಚು ಮಾಡಿ ಔಷಧ ಉಪಯೋಗಿಸಿದ್ದಾಗ್ಯೂ ಪ್ರಯೋಜನವಿಲ್ಲದೆ ತನ್ನ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ ಪ್ರಪಂಚದ ಸುಖವನ್ನು ಪುರೈತುಬಿಡುವಂತೆ ಹೂಡುವರು ಆದ್ದ

ಸ್ತ್ರೀ ವ್ಯಾಧಿಗಳು ಯಾವವೂ ನೇರದಂತೆ ಇಂಗ್ಲೀಷ್ ಡಾಕ್ಟರು ರಹಸ್ಯ ಚೀಲವನ್ನು ಕಂಡುಹಿಡಿದಿರುವರು ಈ ಚೀಲವನ್ನು ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟವ್ಯಾಧಿ ನೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾ ದವನ್ನು ಮತ್ತು ಸುಖವನ್ನು ಕೊಡುವದು

ಹದು ಮರ್ದ ಚೀಲ 1ಕ್ಕೆ ರೂ 1—6—0
ದು ಹರ್ದ ಚೀಲ 1ಕ್ಕೆ ರೂ 3—6—0

ಹೊಸದಾಗಿ ಬಂದಿದೆ ಎಲ್ಲರಿಗೂ ಉಪಯೋಗವಾದದ್ದು.

ಯೂನಿವರ್ಸಲ್ ಟಿಲಿಫೋನ್ ಯಂತ್ರ.



ಈ ಟಿಲಿಫೋನ್‌ಗಳನ್ನು ಜರ್ಮನಿ ದೇಶದ ಹೆಸರು ಹೊಂದಿದ ಟಿಲಿಫೋನ್ ಕಂಪೆನಿಯವರಿಂದ ತಯಾರುಮಾಡಲ್ಪಟ್ಟಿವೆ ಈ ಯಂತ್ರ ಪ್ರತಿ ಒಂದು ಮನೆಗಳಲ್ಲಿಯೂ, ಷಾಪುಗಳಲ್ಲಿಯೂ, ಹೋಟಲ್‌ಗಳಲ್ಲಿಯೂ, ಬಂಗಲೆ ಮಹಡಿಗಳಲ್ಲಿಯೂ ಇಟ್ಟುಬಹು ಶೀಘ್ರವಾಗಿ ಒಬ್ಬರಿಗೊಬ್ಬರೂ ರಹಸ್ಯವಾಗಿ ದೊಡ್ಡ ಟಿಲಿಫೋನ್‌ಗಳಂತೆ ಮಾತಾಡಬಹುದು ಯಾರಿಗೂ ತಿಳಿಯದಂತೆ ಅವರವರ ಮನೆಗಳಲ್ಲಿ ಪಿಟ್ಟಿಂಗ್ Fitting ಮಾಡಿಕೊಳ್ಳಬಹುದು ಇದು ದೊಡ್ಡ ಪಟ್ಟಣಗಳಲ್ಲಿ ಇಡುವ ಟಿಲಿಫೋನ್‌ಗಳ ಹಾಗೆ ಉಪಯೋಗಿಸಬೇಕು ಬೆಲ್ Bell ಸಹಾ ಹೊಡಿಯುತ್ತೆ 9ಇಂಚು ಉದ್ದ ಇದರ ಜೊತೆಯಲ್ಲಿ ವೈರ್ Wire ಅದಕ್ಕೆ ಬೇಕಾದ ಸಾಮಾನುಗಳೆಲ್ಲವೂ ಕಳುಹಿಸಲ್ಪಡುತ್ತೆ ಇದು ಹೊಸಥಾಗಿ ಬಂದಿದ್ದರಿಂದ ಪ್ರತಿದಿವಸವೂ ನೂರಾರು ಖರ್ಚು ಆಗುತ್ತಾ ಇದೆ ಈ ಚಿತ್ರದಲ್ಲಿ ಇರುವಂತೆಯೆ ಇರುವದು ಉಪಯೋಗಿಸುವ ವಿಧ ಇದರ ಜೊತೆಯಲ್ಲಿ ಇಟ್ಟಿದೆ

ಕ್ರಯ ಟಿಲಿಫೋನ್ ಯಂತ್ರ 1ಕ್ಕೆ ರೂ 2—12—0

ಮ್ಮ ಆರ್ಡರ್‌ಗಳನ್ನು ಈ ವಿಳಾಸಕ್ಕೆ ಬರೆದು ವೀ. ಪಿ. ಪಾರ್ಸಲ್ ಮೂಲಕ ತರಿಸಿಕೊಳ್ಳಬಹುದು.

DRABHAN & Co.,
Direct Importers
16, G.P.O. Madras.

ಚಂದ್ರಬಾನ್ ಅಂಡ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 216,
ಮದರಾಸು.

Printed by Manicka Villasam Press Madras.

Reg. No. M. 1550.

if not delivered please return to

"KODAGU" OFFICE MERCARA.

ಕೊಡಗು.

ಸತ್ಯೇನ ಭೂತದಯಯೇಯಾ ವಿದ್ಯಾ ತೀಕ್ಷ್ಣ ಪ್ರಯತ್ನತಾಃ॥ ಜಿಕ್ಷಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೪—೦.

ಸಂಪಾದಕ—ಮೂಚಿಮಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೩ನೇ ಇಸವಿ ಮಾರ್ಚಿ ತಾರೀಕು ೧೭ನೇ ಶುಕ್ರವಾರ. | ಸಂಚಿಕೆ ೪೨

SARI-PIN.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

BRACELETS.
Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35
& upwards according to size.

MARRIAGE PRESENTATIONS.

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Guindys, Photo lockets, Dimond nose-screws. cut-ruby ear-rings. etc., etc., etc., in all prices. Very attractive. Prices most moderate.

Estimates free on enquiry

V. Subramaniyer
Jeweller,

Designs free on enquiry.

Telegrams: 'PRECIOUS.'

Telephone: 3145.

CATALOGUE ON

52–16

Post Box 423, Triplicane, P. O., MADRAS.

ENQUIRY.

The Popular Insurance Co., Ltd.

Head Office :—Mangalore, S. India

The Pioneer Life Office of the West Coast

While having the most up-to-date features in modern life insurance such as easy revival facilities non-forfeiture privileges, permanent dis-ability concession. Joint life assurance female assurance and a very Popular RUPEE POLICY, the company has unrivalled scope for Economic Working

Wanted an influential chief agent for Coorg on most remunerative terms.

For particulars apply to,

The Managing Director.

52–7

ಕೊಡಗು.

ಸನ್ ೧೯೩೩ನೇ ಇಸವಿ

ಮೂರ್ತಿ ತಾ. ೧೭ನೇ ಶುಕ್ರವಾರ.

ಕೊಡಗು ಕೌನ್ಸಿಲೂ ಕೊಡಗಿನ ರಾಜಕೀಯ ಭವಿಷ್ಯತ್ತೂ.

ಕೊಡಗು ಕೌನ್ಸಿಲಿನ ಅಧಿವೇಶನವು ಈ ವಾರದಲ್ಲಿ ನಡೆಯಿತು. ಆದಾಯ ವೆಚ್ಚದ ವಿಷಯ ಚರ್ಚೆಯೇ ಈ ಅಧಿವೇಶನದ ಉದ್ದೇಶವಾಗಿದ್ದರೂ ಮುಂದಿನ ಆದಾಯ ವೆಚ್ಚಕ್ಕೆ ಸಂಬಂಧಿಸುವ ಕೊಡಗಿನ ರಾಜಕೀಯ ಭವಿಷ್ಯತ್ತಿನ ಕುರಿತು ಕೌನ್ಸಿಲು ಮೆಂಬರುಗಳ ಮತ್ತು ಚೀಫ್ ಕಮಿಶನರ ಅಭಿಪ್ರಾಯಗಳು ಹೊರಬಿದ್ದವು. ರಾಜಕೀಯ ಭವಿಷ್ಯತ್ತಿನ ಕುರಿತು ಕಳುಹಿಸಲ್ಪಟ್ಟ ತರಾವನ್ನು ಅಂಗೀಕರಿಸದೆ ಕೌನ್ಸಿಲು ಅಧಿಕಾರಿಗಳು ತಪ್ಪು ಮಾಡಿದರೂ, ನಾವು ಕಳೆದ ವಾರ ಸೂಚಿಸಿದಂತೆ ಚೀಫ್ ಕಮಿಶನರು ತಮ್ಮ ಹಕ್ಕನ್ನು ಉಪಯೋಗಿಸಿ ಈ ವಿಷಯವನ್ನು ಚರ್ಚೆಗೆ ಬಿಡದಿದ್ದರೂ, ರಾಜಕೀಯ ಭವಿಷ್ಯತ್ತಿನ ವಿಷಯದಲ್ಲಿ ಕೌನ್ಸಿಲಿನ ಅಭಿಪ್ರಾಯವು ದೇಶಕ್ಕೂ ಸರಕಾರಕ್ಕೂ ತಿಳಿಯಿತು.

ಕೌನ್ಸಿಲು ಮೆಂಬರುಗಳ ಪೈಕಿ 13 ಜನರು ದೇಶೀಯ ಚುನಾಯಿತ ಮೆಂಬರುಗಳು—ಇವರ ಪೈಕಿ ಒಬ್ಬರು ಗೈರ್ಹಾಜರಾಗಿದ್ದರು. ಇಂಥಾ ಮುಖ್ಯ ಅಧಿವೇಶನಕ್ಕೆ ಇವರು ಹಾಜರಾಗದಿದ್ದದ್ದಕ್ಕೆ ಎಷ್ಟು ವಿಷಾದಿಸಿದರೂ ಸಾಲದು, ಹಾಜರಿದ್ದ 12 ಜನರ ಪೈಕಿ ಒಂಭತ್ತು ಮೆಂಬರುಗಳು ಘಂಟಾಘೋಷವಾಗಿ ತಾ. 18—12—32 ರ ಸರ್ವಪಕ್ಷ ಪರಿಷತ್ತಿನ ತೀರ್ಮಾನಕ್ಕೆ ಬೆಂಬಲವಿತ್ತರು. ಡಿಸ್ಟ್ರಿಕ್ಟ್ ಬೋರ್ಡಿಗೆ ಸರಕಾರದಿಂದ ಪೈಸಿಡೆಂಟರಾಗಿ ನೇಮಿಸಲ್ಪಟ್ಟಿರುವ ಮೆ. ಪಾಂಡಂಡ ಚಂಗಪ್ಪನವರು ಸರ್ವಪಕ್ಷ ಪರಿಷತ್ತಿನ ಅಭಿಪ್ರಾಯವು ದೇಶದ ಬಹು ಜನರ ಅಭಿಪ್ರಾಯವಲ್ಲವೆಂತ ಹೇಳಿದರು. ಈಚೆಗೆ ತಾನೆ ಸರಕಾರದಿಂದ ರಾವ್‌ಸಾಹೇಬ್ ಎಂಬ ಹೆಸರು ಪಡೆದ ರಾವ್‌ಸಾಹೇಬ್ ಶ್ರೀಪತಿರಾಯರು ಸಹ ಸರ್ವಪಕ್ಷ ಪರಿಷತ್ತಿನ ತೀರ್ಮಾನಕ್ಕೆ ಗ್ಯಾವೂಂತರದ ಜನರ ಒಪ್ಪಿಗೆ ಇಲ್ಲವೆಂತ ಅಂದರು. ಇನರಿಬ್ಬರೂ ದೇಶಕ್ಕೆ ಸಂಪೂರ್ಣ ಜವಾಬ್ದಾರಿ ಸರಕಾರವನ್ನೇ ಮಾಡಿಕೊಡಬೇಕಂತಾದರೂ ಹೇಳಲಿಲ್ಲ. ರಾವ್ ಸಾಹೇಬರಾದರೂ ದೇಶಕ್ಕೆ ಆದಷ್ಟು ಹೆಚ್ಚಿನ ಸುಧಾರಣೆ ಪಡೆಯಲು ಈ ಸರ್ವಪಕ್ಷ ಪರಿಷತ್ತಿನ ಮುಂದಾಳುಗಳು ಮೈಸೂರಿಗೆ ಸೇರಬೇಕಂತ ತರಾವು ತಂದದ್ದಂತ ಹೇಳಿದರು. ಇವರು ಈ ರೀತಿ ಊಹೆಮಾಡಲು ಏನೂ ಕಾರಣವಿಲ್ಲ.

ಬಡ್ಜೆಟ್ ಚರ್ಚೆಗೆ ಉತ್ತರಕೊಡುವಾಗ ಸರ್ವಪಕ್ಷ ಪರಿಷತ್ತಿಂತ "ಕರೆಯಿಸಿಕೊಳ್ಳುವ" ಸಭೆಯಿಂದ ಬಂದ ತರಾವಿನಲ್ಲಿ ತುಂಬ ಅಭಿಪ್ರಾಯಗಳು ಅಡಕವಾಗಿವೆಯೆಂತ ಹೇಳಿದರು. "ಕರೆಯಿಸಿಕೊಳ್ಳುವ" ಎಂಬ ಮಾತುಗಳನ್ನು ಹೇಳಿ ಈ ಕೂಟವನ್ನು ತೃಣೀಕರಿಸಿ ಮಾತಾಡಿದ್ದಕ್ಕೆ ಕೌನ್ಸಿಲು ಮೆಂಬರೊಬ್ಬರು ಬೇರೆ ತರಾವನ್ನು ಚರ್ಚಿಸುವಾಗ ಬಲವಾಗಿ ಆಕ್ಷೇಪಿಸಿದರು. ದೇಶದ ಎಲ್ಲಾ ರಾಜಕೀಯ ಸಭೆಗಳ ಕಮಿಟಿಗಳಿಂದ ಮುಂಜೂರಾಗಿ, ಅಂಥ ಸಂಸ್ಥೆಗಳ ಪ್ರತಿನಿಧಿಗಳಿಂದಲೂ ದೇಶದ ಇತರ ಮುಖಂಡರಿಂದಲೂ ಕೂಡಿದ ಸಭೆಯು ಸರ್ವಪಕ್ಷ ಪರಿಷತ್ತಲ್ಲದಿದ್ದರೆ ಬೇರೆ ಯಾವುದು? ಕಾಂಗ್ರೆಸಿನವರು ಈ ಸಭೆಯಲ್ಲಿ ಭಾಗ ತೆಗೆದುಕೊಳ್ಳಲಿಲ್ಲವೆಂತ ಈ ಸಭೆಯು ಜಾಲಕರು ತಿಳಿಸಿಯೇ ಇದ್ದಾರೆ. ಕಾಂಗ್ರೆಸಿನವರು ಸೇರದ್ದರಿಂದ ಇದು ಸರ್ವಪಕ್ಷ ಪರಿಷತ್ತಾಗಲಿಲ್ಲವೆಂತ ಸರ್ಕಾರಿ ಮೆಂಬರು ತಿಳಿಸಲಿಲ್ಲ. ಅವರ ದೃಷ್ಟಿಯಲ್ಲಿ ಕಾಂಗ್ರೆಸು ಯಾವ ಎಣಿಕೆಗೂ ಇಲ್ಲ. ಈಚೆಗೆ ಸರ್ಕಾರದಿಂದ ಡಿಸ್ಟ್ರಿಕ್ಟ್ ಬೋರ್ಡ್ ಪೈಸಿಡೆಂಟರಾಗಿ ನೇಮಿಸಲ್ಪಟ್ಟಿರುವ ಮೆ. ಪಾಂಡಂಡ ಚಂಗಪ್ಪನವರು ಸರ್ವಪಕ್ಷ ಪರಿಷತ್ತಿನಲ್ಲಿ ಹಾಜರಿದ್ದರು. ರಾ. ಸಾ. ಶ್ರೀಪತಿರಾಯರಿಗೂ ಈ ಪರಿಷತ್ತಿಗೆ ಆಮಂತ್ರಣ ಇತ್ತು. ಚೀಫ್ ಕಮಿಶನರು ಬರಮಾಡಿಕೊಂಡಿದ್ದ ಸಭೆಯಲ್ಲದ್ದರಿಂದ ಈ ಸಭೆಯು ತೀರ್ಮಾನಕ್ಕೆ ದೇಶದ ಸರ್ವಸಮ್ಮತವಿಲ್ಲವನ್ನುವುದೋ ಏನೋ?

ಕಮಿಶನರು ಸರ್ವಪಕ್ಷ ಪರಿಷತ್ತಿನ ತರಾವಿನೆ ಮೊದಲನೇ ಭಾಗವಿನ್ನು ಜಾರಿ ಮಾಡುವಂತೆ ಇಂಡಿಯಾ ಸರ್ಕಾರಕ್ಕೆ ತಿಳಿಸಲಾಗಿದೆಯಂತ ಹೇಳಿದರು. ಚೀಫ್ ಕಮಿಶನರ ಭಾಷಣ ಕೇಳಿದನಂತರ ಕಮಿಶನರು ಹೇಳಿದ್ದು ನಿಜವಲ್ಲವೆಂತ ತೋರುತ್ತದೆ. ಇಂಡಿಯಾ ಸರ್ಕಾರಕ್ಕೆ ಚೀಫ್ ಕಮಿಶನರು ಕೊಡಗಿಗೆ ಹಣದ ಸಹಾಯ ಕೊಡಬೇಕಂತ ಒರೆದಿದ್ದಾರೆಯೇ ಹೊರತು ಕೊಡಗಿಗೆ ರಾಜಕೀಯ ಸುಧಾರಣೆ ಕೊಡಬೇಕಂತ ಒರೆಯಲಿಲ್ಲ. ಕೊಡಗಿಗೆ ಯಾವ ತರದ ರಾಜಕೀಯ ಸುಧಾರಣೆ ಬೇಕಂತ ಯೋಚಿಸಲಿಕ್ಕೆ ಸಹ ಇನ್ನೂ ಸಮಯ ಒಂದಿಲ್ಲ ಸರ್ಕಾರಿ ಮೆಂಬರುಗಳಿಗೆ ಯಾವುದು ಸಿಕ್ಕುತ್ತದೆಯೆಂತ ನೋಡಿದರೂ ಸಾಲದು. ದೊಡ್ಡ ವ್ಯಾಂತ್ಯಗಳು ಸುಧಾರಣೆಯನ್ನು ಹೇಗೆ ಉಪಯೋಗಿಸುತ್ತವೆ ಎಂತ ನೋಡಿ ಮತ್ತೆ ಕೊಡಗಿಗೆ ಏನು ಬೇಕೆಂತ ಯೋಚಿಸಬಹುದಂತೆ!

ಈ ತರದ ಅಭಿಪ್ರಾಯವಿರುವ ಚೀಫ್ ಕಮಿಶನರು ಕೊಡಗು 'ಸ್ವತಂತ್ರ' ವಾಗಿಯೇ ಇರುವದನ್ನು ನೋಡಲು ಅಪೇಕ್ಷಿಸುತ್ತೇನೆಂತ ಹೇಳಿದ್ದಾರೆ. ಸ್ವತಂತ್ರವೆಂದರೆ ಬೇರೆಯಾಗಿಯೇ ಇರುವುದು ಎಂಬ ಅರ್ಥದಲ್ಲಿ ಇವರು ಹೇಳಿದ್ದಿಂತ ಇವರ ಭಾಷಣದ ಬೇರೆ ಭಾಗದಿಂದ ತಿಳಿಯುತ್ತದೆ. ಒಬ್ಬ ಮೆಂಬರು ಕೌನ್ಸಿಲು ಭಾಷಣದಲ್ಲಿ ಹೇಳಿದಂತೆ ಬ್ರಿಟಿಷ್ ಆಫೀಸರುಗಳಿಗೆ ವಿಹಾರಸ್ಥಾನವಾಗಿಯೂ ಈ ವರ್ಷದ ರೈತರ ಗೋಳಿನ ಕಾಲದಲ್ಲಿ ಭೂಕಂದಾಯ ಕಡಿಮೆ ಮಾಡಬೇಕಂತ ದೇಶದ ಎಲ್ಲಾ ಮೆಂಬರುಗಳು ಹೇಳಿದಾಗ ರೈತರಿಗೆ ಕಷ್ಟವಿಲ್ಲ, ಕಂದಾಯ ಕಡಿಮೆ ಮಾಡಬೇಕಾದ ಅವಶ್ಯವಿಲ್ಲವೆಂತ ಹೇಳಿದ ಯೂರೋಪಿಯನ್ ಮೆಂಬರನ್ನು ಚುನಾಯಿಸಿದ ಯೂರೋಪಿಯನ್ ಜನರ ಅಭಿಪ್ರಾಯಕ್ಕನುಗುಣವಾಗಿಯೂ ಬೇರೆ ಇಡಬೇಕೆನ್ನುತ್ತಾರೆಯೇ ಹೊರತು, ಕೊಡಗಿನ ಜನರಿಗೆ ಆಡಳಿತವನ್ನು ವಹಿಸಿ ಕೊಡಗು ಸ್ವತಂತ್ರವಾಗಿರುವುದನ್ನು ನೋಡಲು ಅಪೇಕ್ಷಿಸುವುದಲ್ಲ. ಕೊಡಗಿನ ಜನರಿಗೆ ರಾಜಕೀಯ ಸ್ವತಂತ್ರ ಸಿಕ್ಕಿ ಕೊಡಗು ಸ್ವತ್ಯೇಕವಾಗಿರಬೇಕೆಂತ ಇವರ ಅಪೇಕ್ಷೆಯಾದರೆ ಕೊಡಗಿಗೆ ದೊಡ್ಡ ವ್ಯಾಂತ್ಯಗಳಿಗೆ ಕೊಡುವ ರಾಜಕೀಯ ಸುಧಾರಣೆಯನ್ನೇ ಕೊಡಬೇಕೆಂತ ಇವರು ಇಂಡಿಯಾ ಸರಕಾರಕ್ಕೆ ಯಾಕೆ ಬರಕೊಳ್ಳಲಿಲ್ಲ? ಕೊಡಗಿಗೆ ಅವಶ್ಯವಿರುವ ಖರ್ಚು ಮಾಡಲು ಅಥವ ಕೊಡಗಿನ ಸರಕಾರದ ದಿನಚರ್ಯೆದ ಖರ್ಚಿಗೆ ಹಣ ಬೇಕೆಂತ ಇಂಡಿಯಾ ಸರಕಾರವನ್ನು ಚೀಫ್ ಕಮಿಶನರು ಕೇಳಿದ್ದಾರೆಯೇ ಹೊರತು ಕೊಡಗಿಗೆ ಪ್ರಜಾಜವಾಬ್ದಾರಿ ಸರಕಾರ ನಡಿಸಲು ಹಣ ಬೇಕೆಂತ ಬರಕೊಳ್ಳಲಿಲ್ಲ.

ಪ್ರತ್ಯೇಕವಿರಲು ಸಾಧ್ಯವಿಲ್ಲ ಬೇರೆ ವ್ಯಾಂತ್ಯಕ್ಕೆ ಸೇರಬೇಕೆಂತ ಹೇಳುವುದು ಸೋಲಿನ ಮನೋಭಾವವಿರುವವರು ಹೇಳುವುದೆಂತ ಚೀಫ್ ಕಮಿಶನರು ಹೇಳಿದರು. ಈ ಸೋಲಿನ ಮನೋಭಾವವು ಇವರಿಗೂ ಇದೆಯೆಂತ ತಿಳಿದದ್ದು ಸಂತೋಷಕರ. ಇವರು ಇಂಡಿಯಾ ಸರಕಾರಕ್ಕೆ ಬರೆದ ಪತ್ರದಿಂದ ಎತ್ತಿ ಹೇಳಿದ ಮಾತಿನಲ್ಲಿ ಇಂಡಿಯಾ ಸರಕಾರದ ಹಣ ಸಹಾಯಸಿಕ್ಕದಿದ್ದರೆ ಬೇರೆ ದೊಡ್ಡ ವ್ಯಾಂತ್ಯದೊಂದಿಗೆ ಸೇರಬೇಕಾದ ಕಾಲ ಬಂದಿದೆ, ಅಥವ ತೀಕ್ಷ್ಣದಲ್ಲೇ ಬರುತ್ತದೆಯೆಂತ ಹೇಳಿದ್ದಾರೆ. ಈ ರೀತಿ ಮುಂದಾಲೋಚನೆಯನ್ನು ದೇಶದವರೂ ಮಾಡುವುದರಲ್ಲಿ ಆಶ್ಚರ್ಯವೇನಿದೆ? ಚೀಫ್ ಕಮಿತನರಿಗೆ ದೇಶವು ಸ್ವತ್ಯೇಕವಾಗಿರುವುದೇ ಉತ್ತಮವೆಂತ ತೋರಿದರೆ ಅದು ಸಾಧ್ಯವಾಗುವಂತೆ ಇಂಡಿಯಾ ಸರಕಾರದಿಂದ ಹಣದ ವಾಗ್ದಾನ ಪಡೆದು ಸಂಪೂರ್ಣ ಪ್ರಜಾಜವಾಬ್ದಾರಿ ಸರಕಾರ ಪದ್ಧತಿಯನ್ನು ಸ್ಥಾಪಿಸಿಕೊಡಿ ಎಂಬ ಸರ್ವಪಕ್ಷದ ತರಾವಿನ ಮೊದಲನೇ ಭಾಗವಿದೆ. ತಿಳುವಳಿಕೆ ಇರುವ ಯಾರಿಗಾದರೂ ಇದು ಸಾಧ್ಯವಿಲ್ಲವೆಂತ ತೋರುತ್ತದೆ. ಅದಕ್ಕಾಗಿಯೇ ದೊಡ್ಡ ವ್ಯಾಂತ್ಯದೊಂದಿಗೆ ಸೇರಿಸುವ ಸಲಹೆಯನ್ನು ಜೊತೆಯಲ್ಲೇ ಕೊಟ್ಟಿರುವುದಾಗಿದೆ.

ಕೌನ್ಸಿಲನ್ನು ಮುಂದರಿಸುವಾಗ ಚೀಫ್ ಕಮಿಷನರವರು ಮಾಡಿದ ಭಾಷಣ.

ಮಹನೀಯರೇ,

ಸಾಧಾರಣವಾಗಿ ನಾನು ಈಗ ಈ ಕೌನ್ಸಿಲನ್ನು ಮುಕ್ತಾಯಪಡಿಸಿ ಹೊಸ ಕೌನ್ಸಿಲ್ ಚುನಾವಣೆಗೆ ಎಡೆ ಕೊಟ್ಟು ನವಂಬರಿನಲ್ಲಿ ಹೊಸ ಕೌನ್ಸಿಲ್ ಸೇರುತ್ತದೆಯೆಂತ ತಿಳಿಸಬೇಕಿತ್ತು, ಆದರೆ ಹಾಗೆ ಮಾಡುವುದಿಲ್ಲ. ಕೌನ್ಸಿಲೇನೋ ಸೇರುತ್ತದೆ, ಆದರೆ ಆಗ ಇಲ್ಲಿ ಕೂತಿರುವ ಕೌನ್ಸಿಲೇ ಸೇರುವುದಾಗಿದೆ. ಇಂಡಿಯಾ ಸರ್ಕಾರದವರು ಎಲ್ಲಾ ವಿದ್ಯಮಾನಗಳನ್ನು ಪರ್ಯಾಲೋಚಿಸಿ ಕೊಡಗು ಕೌನ್ಸಿಲಿನ ವಾಯಿದೆಯನ್ನು ಮುಂದರಿಸಬೇಕೆಂತ ತೀರ್ಮಾನಿಸಿದ್ದಾರೆ. ಹಾಗೆ ಮುಂದರಿಸಲಾಗಿದೆಯೆಂತ ಕ್ರಮೇಣ ಹುಕುಂ ಬರುತ್ತದೆ. ಬಹುಶಃ ಒಂದು ವರ್ಷಕ್ಕೆ ಮುಂದರಿಸಬಹುದು. ಮಹನೀಯರೇ, ಇಂಡಿಯಾ ಸರ್ಕಾರದ ಈ ತೀರ್ಮಾನವು ನನಗೆ ತೃಪ್ತಿಯನ್ನುಂಟು ಮಾಡಿದಂತೆ ನಿಮಗೂ ತೃಪ್ತಿಯನ್ನುಂಟು ಮಾಡಬಹುದೆಂತ ನಂಬುತ್ತೇನೆ. ನೀವು ಮೆಂಬರುಗಳಾಗಿದ್ದ ಕಾಲವೆಲ್ಲಾ ಪ್ರಪಂಚದ ಆರ್ಥಿಕ ಸ್ಥಿತಿಯ ಮೋಡದಿಂದ ಕವಿಯಲ್ಪಟ್ಟಿತ್ತು. ಅದರಿಂದ ಕೊಡಗಿನ ಆರ್ಥಿಕ ಸ್ಥಿತಿಯು ಮೇಲೂ ಪರಿಣಾಮವಾಗಿತ್ತು. ಈಗ ನಾವು ಒಪ್ಪಿಕೊಂಡ ಬಡ್ಜೆಟ್ಟೇ ದುರಾದೃಷ್ಟದ ಆಖೈರು ಆಗಿರಬಹುದೆಂತ ನಂಬುತ್ತೇನೆ. ನೀವು ಆ ಖೈರಿನಲ್ಲಿ ನಿಮ್ಮ ಪದವಿಯನ್ನು ಬಿಡುವಾಗ ಈಗಲಿಗಿಂತ ಉತ್ತಮ ಆರ್ಥಿಕ ಸ್ಥಿತಿಯಲ್ಲಿ ಬಿಡುವಿರೆಂಗಿ ನಂಬುತ್ತೇನೆ. ನೀವು ನಿಮ್ಮ ಪದವಿಯನ್ನು ಬಿಡುವಾಗ ಕೊಡಗಿಗೆ ಉತ್ತಮ ಸ್ಥಿತಿ ಮುಂದೆ ಇದೆಯೆಂಬ ತಿಳುವಳಿಕೆಯಿಂದ ಅದರಲ್ಲು ಕೊಡಗಿಗೆ ಒಂದೊದಗಿದ ಅತಿ ಕಷ್ಟ ಕಾಲದಲ್ಲಿ ಬಲ ಕಡಿಮೆಯಾಗಿದ್ದ ದೋಣಿಯಾಗಿದ್ದಿದ್ದೂ ದೋಣಿ ಬಡದೇ ಬೇಕಾಗಿದ್ದ ಸ್ಥಿತಿಯಲ್ಲಿ ನೀವು ಸರ್ಕಾರಕ್ಕೆ ಸಹಾಯಕರಾಗಿದ್ದೀರಿ ಎಂಬ ಸಂತೋಷದ ತಿಳುವಳಿಕೆಯೊಡನೆ ಬಿಡುತ್ತಿದ್ದಿರಿ.

ನೀವು ಪುನಃ ಕೌನ್ಸಿಲಿನಲ್ಲಿ ಸೇರುವಿರಾದರೂ ನಿಮ್ಮ ಅಧ್ಯಕ್ಷನಾಗಿ ನಾನು ಮಾತಾಡುವ ಅವಕಾಶವು ಇದೇ ಕಡೆಯದು ಎಂತ ಮನಸ್ಸಿನ ಪಡುತ್ತೇನೆ. ಆದರಿಂದ ಕೆಲವು ಸಾರ್ವಜನಿಕ ವಿಷಯಗಳ ಕುರಿತು ನಾನು ಕೆಲವು ಮಾತಾಡುವುದಕ್ಕೆ ಎಡೆಕೊಡಬೇಕು. ಮೊದಲಾಗಿ ಕೌನ್ಸಿಲ್ ಸಂಬಂಧವಾಗಿಯೇ ಹೇಳಬೇಕಾಗಿದೆ ನನಗೆ ನೀವು ಸಹಾಯಕರಾಗಿದ್ದದ್ದಕ್ಕೂ ದಯ, ಕ್ಷಮೆ ತೋರಿಸಿದ್ದಕ್ಕೂ ನಿಮಗೆ ವಂದಿಸುತ್ತೇನೆ. ಮನಃ ಪೂರ್ತಿಯಾಗಿ ವಂದಿಸುವುದಾಗಿದೆ. ದೊಡ್ಡತನ, ಸೋಲು, ಗಂಡು, ಹೆಣ್ಣು ಎಂಬ ಭೇದ ವಗೈರೆ ತರದ ಮನೋಬಾವಗಳು ಇರುವ ಕಾಲದಲ್ಲಿ ನಾವು ಈಗ ಇದ್ದೇವೆ. ನಮ್ಮ ವಾದಗಳನ್ನು ಕೇಳಿದ ಮೂರನೇಯವರಿಗೆ ನಮ್ಮ ಕೌನ್ಸಿಲಿನಲ್ಲಿ ಮನಸ್ಸನ್ನೆಲ್ಲಾ ಸೋಲೇ ತುಂಬಿರುವ ಕೆಲವರಿದ್ದಾರೆ ಎಂತ ಸುಲಭವಾಗಿ ತೋರಬಹುದು. ಮೆಂಬರ ನಂತರ ಮೆಂಬರೆದ್ದು ಈ ಕೌನ್ಸಿಲು ನಿಷ್ಪ್ರಯೋಜನವಾದ ಸಂಸ್ಥೆ. ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಆಗುವುದೂ ಇಲ್ಲವೆಂತ ಬಲವಾಗಿ ಭಾಷಣಮಾಡಿದ್ದಾರೆ. ಮೂರನೇಯನರು, ಹಾಗಾದರೆ ಇಂಥಾ ಮಹನೀಯರು ಈ ಕೌನ್ಸಿಲಿನಲ್ಲಿಯಾಕೆ ಇದ್ದಾರೆ ಎಂತ ಆಶ್ಚರ್ಯ ಪಡಬಹುದು. ಆದರೆ ಈಗ ಮೂರು ವರ್ಷಗಳಿಂದ ನನಗೆ ಇದ್ದ ಅನುಕೂಲದಂತೆ ಅವರಿಗೆ ನಿಮ್ಮ ಅಧ್ಯಕ್ಷರಾಗಿರಲು ಅವಕಾಶವಿದ್ದಿದ್ದರೆ ಈ ಕೌನ್ಸಿಲಿನಿಂದ ಆದ ದೃಢವಾದ ಕೆಲಸಗಳೂ ಗವರ್ನಮೆಂಟಿನ ಕಾರ್ಯಗಳ ಮೇಲೆ ಕೌನ್ಸಿಲು ಉಂಟು ಮಾಡಿದ ಬಲವಾದ ಪರಿಣಾಮಗಳೂ ತಿಳಿಯುತ್ತಿತ್ತು. ಅಂಥಾ ಪರಿಣಾಮಗಳನ್ನುಂಟು ಮಾಡಿದ್ದರಲ್ಲಿ ಹೀಗೆ ಮಾತಾಡಿದ ಮೆಂಬರುಗಳು ಸಹ ಭಾಗಿಗಳಾಗಿದ್ದಾರೆ. ಆದ್ದರಿಂದ ಹೀಗೆ ಮಾತಾಡಿದವರು ತಮ್ಮ ದೇಶದ ಮೇಲಿನ ವಾತ್ಸಲ್ಯದಿಂದ ತಮ್ಮ ದೇಶದ ಅಭಿವೃದ್ಧಿಗೂ ಕ್ಷೇಮಕ್ಕೂ ತುಂಬಾ ಕುತೂಹಲವುಳ್ಳವರಾಗಿದ್ದಾರೆಂತಲೂ ತಿಳಿಯುತ್ತಿತ್ತು. ಅಂಥವರನ್ನು ತೃಪ್ತಿಗೊಳಿಸುವುದು ಸುಲಭವಲ್ಲ. ಅಂಥವರ ಧ್ಯೇಯವನ್ನು ಸಂಪಾದಿಸುವುದು ಸುಲಭವಲ್ಲ. ಆದ್ದರಿಂದ ಈ ಕೌನ್ಸಿಲಿನಿಂದ ಆಗುವ ಮತ್ತು ಆದ ದೃಢವಾದ ಮತ್ತು ನಿಜವಾದ ಪ್ರಯೋಜನವನ್ನು ನೀವು ತಿಳಿದುಕೊಂಡಿಲ್ಲವೆಂತ ನಾನು ನಂಬುವುದಿಲ್ಲ. ಈಗ ಇರುವಂತೆ ಈ ಕೌನ್ಸಿಲ್ ಆಲೋಚನೆ ಕೊಡುವ ಸಂಸ್ಥೆಯಾಗಿದೆ. ಆದರೆ ಅದರ ಅಧಿಕಾರಗಳು ಅಲ್ಪವಲ್ಲ. ನೀವೇ ಚುನಾಯಿಸುವ ಫೈನಾನ್ಸ್ ಕಮಿಟಿಯು ವಾರ್ಷಿಕ ಬಡ್ಜೆಟ್ಟನ್ನು ತಯಾರಿಸುವುದೆಂತ ಹೇಳಬಹುದು. ಅವರು ಮಾಡಿದ ಸಲಹೆಗಳನ್ನು ಬಿಟ್ಟು ಸರ್ಕಾರವು ಹೋಗುವುದು ಅಸರೂಪ. ಪಬ್ಲಿಕ್ ಎಕೌಂಟ್ಸ್ ಕಮಿಟಿಯಲ್ಲಿ ಕೌನ್ಸಿಲ್ ಮೆಂಬರುಗಳು ಕೊಡುವ ಅಭಿಪ್ರಾಯಗಳಿಗೆ ಸರ್ಕಾರವು ತುಂಬಾ ಗಮನ ಕೊಡುತ್ತದೆ.

ಕಳೆದ ನವಂಬರ್ 28ರಲ್ಲಿ ಕೂಡಿದ ಕಮಿಟಿಯು ವರದಿಯ ಉದಾಹರಣೆಯನ್ನು ಕೊಡುತ್ತೇನೆ, ಕೊಡಗಿನ ಆರ್ಥಿಕ ಸ್ಥಿತಿಯನ್ನು ವಿಮರ್ತಿಸುತ್ತಾ ಕಮಿಟಿಯು ಹೇಳಿರುವುದೇನೆಂದರೆ—

'ಎಕೌಂಟಿಟ್ ಜನರಲರ ವರದಿಯ 8ನೇ ಪೇರಾದಲ್ಲಿ ಹಿಡಿತಕ್ಕೆ ಒಳಗಾಗದ ಕಾರಣಗಳಿಂದ ಆರ್ಥಿಕ ಸ್ಥಿತಿಯು ಗಾಬರಿಗೊಳಿಸುವಂಥದ್ದಾದರೂ, ವ್ಯಾಂತ್ಯದ ಆರ್ಥಿಕ ಆಡಳಿತವು ಮೊದಲಿನಂತೆಯೇ ಚೆನ್ನಾಗಿದೆ' ಎಂತ ಬರೆದಿದ್ದಾರೆ. ವಿದ್ಯಮಾನಗಳನ್ನು ನೋಡಿದರೆ ಆಡಳಿತವು ಗಾಂಭೀರ್ಯವಾಗಿದೆಯೆಂತಲೇ 4 ನೇ ಪೇರಾದಲ್ಲಿ ಹೇಳಿದ್ದಾರೆ. ಈ ಮಾತುಗಳಿಗೆ ನಾವು ಎಕೌಂಟಿಟ್ ಜನರಲರಿಗೆ ಋಣಿಯಾಗಿದ್ದೇವೆಯೊದರೂ ಹಿಂದಿನ ಒಳ್ಳೇ ಆರ್ಥಿಕ ಆಡಳಿತವು ದೇಶದ ಅಭಿವೃದ್ಧಿಗೆ ಅತ್ಯವಶ್ಯವಿರುವ ಕೆಲಸಗಳನ್ನು ಮಾಡಲೆ ಹಣ ಉಳಿಸಿದ್ದರಿಂದ ಆಗಿದೆಯೆಂತ ನಾವು ಹೇಳಬೇಕಾಗಿದೆ. ನಮಗೆ ಸಿಲ್ಕು ಹಣವನ್ನು ಕೊಡಬೇಕೆಂತ ಕೇಳಿದ್ದಕ್ಕೆ ಇಂಡಿಯಾ ಸರ್ಕಾರವು ಕೊಡದಿದ್ದದಕ್ಕೆ ನನ್ನ ಅತೃಪ್ತಿಯನ್ನು ಸೂಚಿಸಲೇ ಬೇಕಾಗಿದೆ, ಹಾಗೆ ಕೊಡದಿರಲು ಕೊಡಗಿನ ಸ್ಥಿತಿಯನ್ನು ನೋಡಿದರೆ ಆರ್ಥಿಕ ಸಹಾಯ ಬೇಕಾದಂತೆ ಕಂಡುಬರುವುದಿಲ್ಲವೆಂತ ಇಂಡಿಯಾ ಸರಕಾರವು ಕಾರಣ ಕೊಟ್ಟಿದೆ, ಆದರೆ ವ್ಯಾಂತ್ಯದ ಆರ್ಥಿಕ ಭದ್ರತೆಯನ್ನು ಉಳಿಸಬೇಕಾದರೆ ದೇಶದವರಿಗೆ ಅತಿ ಅವಶ್ಯವಿರುವ ಖರ್ಚು ಸಹ ಮಾಡದೆ ಇರಲಾಗಿದೆ. ಇಂಥಾ ಖರ್ಚುಗಳನ್ನು ಎತ್ತಿ ಇಲ್ಲದೆ ಮುಂದಕ್ಕೆ ಇಡಲು ಸಾಧ್ಯವಿಲ್ಲ, ಆದ್ದರಿಂದ ಈ ವಿಷಯದಲ್ಲಿ ಪುನಃ ಬರಕೊಳ್ಳಬೇಕೆಂತ ಸ್ಥಳೀಯ ಸರ್ಕಾರಕ್ಕೆ ಸೂಚನೆ ಕೊಡುತ್ತೇನೆ.

ಸ್ಥಳೀಯ ಸರ್ಕಾರವು ಈ ವರದಿಯನ್ನು ಇಂಡಿಯಾ ಸರ್ಕಾರಕ್ಕೆ ಬರೆಯುವಾಗ ಹೇಳಿರುವುದೇನೆಂದರೆ—

"ಆಡಿಟರ್ ಜನರಲರ ಪತ್ರದ 4ನೇ ಪೇರಾದಲ್ಲಿ ಬರೆದ ತೃಪ್ತಿಕರವಾದ ಮಾತುಗಳನಂತರ ಖರ್ಚಿನ ಬಾಬಿನಲ್ಲಿ ಚೀಫ್ ಕಮಿಶನರು ಹೆಚ್ಚೇನೂ ಹೇಳಬೇಕಾಗಿಲ್ಲ, ಆದರೆ ಪಬ್ಲಿಕ್ ಎಕೌಂಟ್ಸ್ ಕಮಿಟಿಯು 5ನೇ ಪೇರಾದಲ್ಲಿ ಬರೆದ ಮಾತುಗಳನ್ನು ಒತ್ತಿ ತೋರಿಸಬೇಕಾಗಿದೆ. ಅಲ್ಲಿ ಹೇಳಿರುವ ಮಾತುಗಳನ್ನು ಚೀಫ್ ಕಮಿಶನರು ಒಪ್ಪುತ್ತಾರೆ, ಕೊಡಗಿನ ಆಡಳಿತವನ್ನು ಜಾಗ್ರತೆಯಾಗಿ ನಡಿಸಿದ್ದನ್ನು ಆಡಿಟರ್ ಜನರಲರು ಹೊಗಳಿದ್ದಕ್ಕೆ ನಾನು ಕೃತಜ್ಞನಾದೂ ದೇಶದ ಅತ್ಯವಶ್ಯದ ಖರ್ಚುಗಳನ್ನು ಸಹ ಮಾಡದೆ ಆಡಳಿತ ನಡಿಸಿದ್ದಾಗಿದೆ, ಆದರೆ ಅಂಥಾ ಖರ್ಚುಗಳನ್ನು ಇನ್ನೂ ಮುಂದಕ್ಕೆ ಹಾಕಲು ಸಾಧ್ಯವಿಲ್ಲ. ಈ ವ್ಯಾಂತ್ಯಕ್ಕೆ (ಕೊಡಗಿಗೆ) ಇಂಡಿಯಾ ಸರ್ಕಾರವು ಸಹಾಯ ಕೊಡಬೇಕು, ಇಲ್ಲವಾದರೆ ಯಾವುದಾದರೂ ದೊಡ್ಡ ವ್ಯಾಂತ್ಯಕ್ಕೆ ಕೊಡಗನ್ನು ಸೇರಿಸಬೇಕು ಎಂಬ ಸ್ಥಿತಿ ಈಗಾಗಲೇ ಬಂದಿದೆ. ಅಥವಾ ತೀಕ್ಷ್ಣದಲ್ಲೇ ಬರುತ್ತದೆ,

(4ನೇ ಪುಟದಲ್ಲಿ ಮುಂದುವರಿದಿದೆ.)

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲ್

ತಾ. 10—3—33 ನೇ ಶುಕ್ರವಾರ ದಿನ 11 ಘಂಟೆಗೆ ಕೊಡಗು ಕೌನ್ಸಿಲಿನ ಅಧಿವೇಶನವು ಚೀಫ್ ಕಮಿಶನರ ಅಧ್ಯಕ್ಷತೆಯಲ್ಲಿ ಮಡಿಕೇರಿ ಅರಮನೆಯ ಈಗ ರಿಪೇರಿಯಾದ ಭಾಗದ ಮಹಡಿಯಲ್ಲಿರುವ ಹೊಸ ಹಾಲಿನಲ್ಲಿ ಸಡೆಯಿತು. ಸವಾಲ್ ಜವಾಬು ನಡೆದ ನಂತರ ಕೌನ್ಸಿಲಿನ ಸೆಪ್ಟೆಂಬರ್ ಅಧಿವೇಶನದಲ್ಲಿ ಮಂಜೂರಾದ ತರಾವುಗಳಿಗೆ ಚೀಫ್ ಕಮಿಶನರ ಜವಾಬು ಸಭೆಯ ಮುಂದೆ ಇಡಲಾಯಿತು.

ವೀರರಾಜಪೇಟೆ ನಾಲ್ಕನಾಡು ರಸ್ತೆಯನ್ನು ದುರಸ್ತು ಮಾಡಬೇಕೆಂಬ ತರಾವನ್ನೂ, ಸಾದೆ, ಮರ, ಬಿದಿರು ವಗೈರೆಗಳಿಗೆ ದರ್ಖಾಸ್ತು ಬರಕೊಳ್ಳುವುದಕ್ಕೆ ಸ್ವಾಂಪು ಕಡಿಮೆ ಮಾಡಬೇಕೆಂಬ ತರಾವನ್ನೂ, ಕೊಡಗು ರೆವೆನ್ಯೂ ಮ್ಯಾನ್ಯುಯಲನ್ನು ತಿದ್ದುಪಡಿ ಮಾಡಲು ಕಮಿಟಿ ನೇಮಿಸಬೇಕೆಂಬ ತರಾವನ್ನೂ ಅಂಗೀಕರಿಸಲಾಗುವುದಿಲ್ಲವೆಂತಲೂ ಹೆರವನಾಡಲ್ಲೆ ಇಲಾಚಿ ಸಾಗುವಳಿಗೆ ಕೊಟ್ಟ ಜಮೀನನ್ನು ಪರಾಧೀನ ಮಾಡುವುದಾದರೆ ಊರವರಿಗೇನೇ ಮಾಡುವಂತೆ ನಿಬಂಧನೆ ಮಾಡಬೇಕೆಂಬದನ್ನೂ ಅಂಗೀಕರಿಸಲಾಗಿದೆಯೆಂತಲೂ, ರಾಜಕೀಯ ಸುಧಾರಣೆಯ ಸಂಬಂಧವಾದ ತರಾವನ್ನು ಇಂಡಿಯಾ ಸರಕಾರಕ್ಕೆ ಕಳುಹಿಸಲಾಗಿದೆಯೆಂತಲೂ ತಿಳಿಸಿದರು.

ಬಡ್ಜೆಟ್ ಚರ್ಚೆ.

ಕಮಿಶನರು 1933—34 ನೇ ವರ್ಷದ ಬಡ್ಜೆಟ್ಟನ್ನು ಸಭೆಯ ಮುಂದೆ ಇಡುವಾಗ ಮಾಡಿದ ಭಾಷಣದ ಸಾರಾಂಶ:—

"ಹಾಲಿ ವರ್ಷದ ದೇಶದ ಆರ್ಥಿಕ ಸ್ಥಿತಿಯನ್ನು ವರ್ಣಿಸುತ್ತಾ ಹೇಳಿದ್ದೇನೆಂದರೆ—ದೇಶದ ಆರ್ಥಿಕ ಸ್ಥಿತಿಯು ಸಂಪೂರ್ಣವಾಗಿ ಕೃಷಿಯನ್ನೇ ಹೊಂದಿದೆ. ಪ್ರಪಂಚದ ವ್ಯಾಪಾರದ ದುಸ್ಥಿತಿಯಿಂದ ಕೃಷಿ ಉತ್ಪತ್ತಿಗಳಿಗೆ ಬೆಲೆ ಇಲ್ಲದಾಗಿ ಇದರ ಪರಿಣಾಮವು ಕೊಡಗಿಗೂ ತಟ್ಟಿದೆ. ಭತ್ತದ ಬೆಳೆಯು ಉತ್ತಮವಾದೀತೆಂತ ನಿರೀಕ್ಷಿಸಿದಂತೆ ಆಗಲಿಲ್ಲ, ಸ್ವಲ್ಪವಾಗಿ ತಗ್ಗು ಜಮೀನುಗಳಲ್ಲಿ ಬೆಳೆಯು ಕಡಿಮೆಯೂ ಒಟ್ಟಿನ ಮೇಲೆ ಕಳೆದ ವರ್ಷಕ್ಕಿಂತ ಶೇಕಡ 10 ರ ಕಡಿಮೆಯೆನ್ನಬಹುದು, ಭತ್ತದ ಕ್ರಯವೂ ಕಳೆದಂತ ಗಾಡಿಗೆ ಸರಾಸರಿ 3 ರೂ, ಕಡಿಮೆಯೆನ್ನಬಹುದು, ಕಾಫಿ ಪಸಲೂ ವರ್ಷದ ಶೇಕಡ 60 ರಷ್ಟು ಆಗಿದೆ, ವ್ಯಾಪಾರಾರಂಭದಲ್ಲಿ ಚೆನ್ನಾಗಿ ತೋರಿಬಂದರೂ ಈಚೆಗೆ ಬಿದ್ದು ಹೋಗಿದೆ, ಕಾಳುಕ್ಕ ಪಸಲು ಉತ್ತಮವಾದರೂ ಬೆಲೆಯು 30 ರೂ, ಇದ್ದದ್ದು 20 ರೂ, ಗೆ ಇಳಿದು ಹೋಗಿದೆ, ಈ ಸಮಯದಲ್ಲಿ ಯಾಲಕ್ಕಿಗೆ ಬೆಲೆ ಬರುವ ಪದ್ಧತಿ ಇದ್ದರೂ ಈ ವರ್ಷ ಬರಲಿಲ್ಲ, ಈಗ ಕೊಡಗಿಗೆ ಉಂಟಾದಷ್ಟು ಆರ್ಥಿಕ ದುಸ್ಥಿತಿಯು ಹಿಂದೆ ಎಂದೂ ಆಗಿರಲಿಲ್ಲ. ಇದರ ಪರಿಣಾಮವು ಸಂಕಾರದ ಆದಾಯ ವೆಚ್ಚಕ್ಕೂ ತಟ್ಟಿದೆ, ಕೊಡಗಿನಲ್ಲೂ ರಾಜಕೀಯ ಚಳವಳಿಯು ಕೆಲವು ಎಟ್ಟಿಗೆ ಇತ್ತು, ಆದು ಅದರಿಂದ ಸರಕಾರದ ಆದಾಯವೆಚ್ಚಕ್ಕೇನೂ ತೊಂದರೆ ಬರಲಿಲ್ಲ ಬೇರೆ ಕಡೆಗಳಲ್ಲೂ ಸಹ ಬೇರೆ ಕಾರಣದಿಂದ ಉಂಟಾದ ಆರ್ಥಿಕ ದುಸ್ಥಿತಿಯನ್ನು ರಾಜಕೀಯ ಚಳವಳಿಗಾರರು ಉಪಯೋಗಿಸಿಕೊಂಡಲ್ಲೇ ಹೊರತು ರಾಜಕೀಯ ಚಳವಳಿದಿಂದ ಆರ್ಥಿಕ ಸ್ಥಿತಿಯಲ್ಲಿ ವ್ಯತ್ಯಾಸವಾಗಿಲ್ಲ, ತೀಘ್ರದಲ್ಲೇ ಪ್ರಪಂಚದ ಆರ್ಥಿಕ ಸ್ಥಿತಿಯು ಉತ್ತಮವಾದೀತೆಂತ ಆಶಿಸುತ್ತಾ,

1931—32 ರ ಆದಾಯವೆಚ್ಚದ ಫಲಿತಾಂಶವು ಯೋಚಿಸಿದ್ದದ್ದಕ್ಕಿಂತ ಉತ್ತಮವಾಯಿತು, ಉತ್ಪತ್ತಿಗಿಂತ ಖರ್ಚು ಹೆಚ್ಚಾಗಬಹುದೆಂತ ಯೋಚಿಸಿದ್ದರೂ ಅರ್ಧ ಲಕ್ಷವೂತ್ತ ಹೆಚ್ಚಾಯಿತು, ಖರ್ಚು ಕಡಿಮೆ ಮಾಡಿದ್ದರಿಂದಲೂ ಹೆಚ್ಚಿನ ಯಾವ ಖರ್ಚನ್ನೂ ಮಾಡದ್ದರಿಂದಲೂ ಗಂಧಕ್ಕೆ ಬೆಲೆ ಬಂದದ್ದರಿಂದಲೂ ಹೀಗಾಯಿತು, ವರ್ಷಾಂತ್ಯದ ಸಿಲ್ಕು ಮೂರುವರೆ ಲಕ್ಷ ಉಳಿಯಿತು, ಆದರೆ 1932—33 ರ ಸ್ಥಿತಿಯು ತೋಡಸನೀಯವಾಗಿದೆ, ಬರೇ 10,000 ರೂ, ನಷ್ಟವಾಗಬಹುದೆಂತ ಯೋಚಿಸಿದ್ದದ್ದು ಈಗ ಅನುಭವದಿಂದ ತಿದ್ದುಪಡಿಯಾದ ಒಡ್ಜೆಟ್ಟಿನಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚಿಗೆ ನಷ್ಟವಾಗಬಹುದೆಂತ ಅಂದಾಜು ಮಾಡಲಾಗಿದ, ಖರ್ಚು ಕಡಿಮೆ ಮಾಡಿಯೂ ಹೊಸ ಕೆಲಸವನ್ನು ಕೈಕೊಳ್ಳದಿದ್ದರೂ ಹೀಗಾಗಿದೆ, ಈ ಕೆಳಗಿನ ಈ ಮೂರು ಬಾಬುಗಳಿಂದ ಆ ದಾಡು ಮಾಡಿದ ಉತ್ಪತ್ತಿ ದೊರೆತಿದ್ದರೆ ಹೀಗಾಗುತ್ತಿರಲಿಲ್ಲ ಫಾರೆಸ್ಟ್, ಎಕ್ಸೈಸ್, ಸ್ಟಾಂಪು ಮೂರು ಬಾಬುಗಳಲ್ಲಿ ಉತ್ಪತ್ತಿ ಕಡಿಮೆಯಾಯಿತು, ಎಕ್ಸೈಸ್‌ನಲ್ಲಿ 36,000 ರೂ, ಸ್ಟಾಂಪಿನಲ್ಲಿ 20,000 ರೂ, ಕಡಿಮೆಯಾಯಿತು, ಈ ಬಾಬುಗಳು ಜನರ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿವೆ, ಸಾರಾಯಿ ಮೇಲೆ ಹಾಕುವ ಸ್ಪೆಷಲ್ ಹೆಡ್ ಡ್ಯೂಟಿಯನ್ನು ಹೆಚ್ಚಿಸಿದಾಗ ಟೀಕೆಗೆ ಗುರಿಯಾಗಿತ್ತು, ಆದರೆ ಹೀಗೆ ಮಾಡಿದ್ದು ಉತ್ತಮವಾಯಿತೆಂತ ಈಗ ಅನುಭವದಿಂದ ತಿಳಿದು ಬಂದಿದ. ಇಲ್ಲವಾಗಿದ್ದರೆ ನಷ್ಟವು ಇನ್ನೂ ಹೆಚ್ಚಾಗುತ್ತಿತ್ತು, ಕಾಫಿ, ಭತ್ತದ ಬೆಳೆಯ ಕ್ರಯವೂ ಕಡಿಮೆಯಾದ್ದರಿಂದ ಎಕ್ಸೈಸ್ ಉತ್ಪತ್ತಿ ಕಡಿಮೆಯಾಯಿತು,

ಫಾರೆಸ್ಟ್‌ನಲ್ಲಿ ಮರಗಳ ವ್ಯಾಪಾರವು ಚೆನ್ನಾಗಿಯೇ ಆಯಿತು, ಬೆಲೆಯೂ ಜಾಸ್ತಿ, ಆದರೆ ಗಂಧದ ಬೆಲೆಯು ಬಹಳ ಬಿದ್ದು ಹೋಯಿತು, 229 ಟನ್ ಗಂಧವನ್ನು ಸುಮಾರು 900 ರೂ, ದಂತೆ ಮಾರಬಹುದೆಂತ ಯೋಚಿಸಲಾಗಿತ್ತು, ಆದರೆ ಬರೇ 126 ಟನ್ ಮಾತ್ರ ಮಾರಲು ಸಾಧ್ಯವಾಯಿತ, ಅದೂ ಸಹ ಬರೇ 820 ರೂ, ದರದಲ್ಲಿ ಪಂದೇಶಗಳಲ್ಲಿ ಗಂಧದ ಎಣ್ಣೆಯ ಬೆಲೆಯು ಬಿದ್ದು ಹೋದದ್ದರಿಂದ ಹೀಗಾಯಿತು, ಆದ್ದರಿಂದ 103 ಟನ್ ಗಂಧ ಮಾರುವುದನ್ನು ಮುಂದರಿಸಿ ಇಡಲಾಯಿತು. ಈಗ ಬಡ್ಜೆಟ್ಟಿನಲ್ಲಿ ತೋರಿಬರುವ ನಷ್ಟವು ಮಾರದೆ ಇರುವ ಗಂಧದ ಬೆಲೆಯಿಂದ ಭರ್ತಿಯಾಗುತ್ತದೆ. ಗಂಧದ ಬೆಲೆಯು ವ್ಯತ್ಯಾಸವಾಗುವುದರಿಂದಲೂ, ಆರ್ಥಿಕ ಸ್ಥಿತಿಯು ಸ್ಥಿಮಿತವಾಗಿಲ್ಲದ್ದರಿಂದಲೂ ಬಡ್ಜೆಟ್ಟನ್ನು ಸರಿಯಾಗಿ ತಯಾರಿಸುವುದು ಕಷ್ಟವಾಗಿದೆ.

1933—34. ಈ ವರ್ಷ ಸರಕಾರಿ ಉತ್ಪತ್ತಿಯು ಕಡಿಮೆಯಾಗಿ ಹೊದ್ದರಿಂದ 1933-34 ರಲ್ಲಿ ಸಿಲ್ಕು ರೂ, 1,18,000 ರೂ, ಮಾತ್ರ ಇರಬಹುದೆಂತ ಅಂದಾಜು ಮಾಡಲಾಗಿದೆ. ಸರಕಾರದ ಉತ್ಪತ್ತಿಗಳಲ್ಲಿ ದೊಡ್ಡದಾದ ಬಾಬುಗಳು ನಾಲ್ಕು—ಭೂಕಂದಾಯ, ಎಕ್ಸೈಸ್, ಸ್ಟಾಂಪು ಮತ್ತು ಫಾರೆಸ್ಟ್ ಭೂಕಂದಾಯದ ಮೇಲೆ ಹೆಚ್ಚೇನೂ ಹೇಳಬೇಕಾಗಿಲ್ಲ: ಅದು ಅಷ್ಟೊಂದು ವ್ಯತ್ಯಾಸವಾಗುವುದಿಲ್ಲ. ಈಗ ಬಂದಿರುವ ತರಾವುಗಳ ಮೇರೆ ಈ ಬಾಬಿನ ಉತ್ಪತ್ತಿಯನ್ನು ಶೇಕಡ 12½ ಯಷ್ಟು ಕಡಿಮೆ ಮಾಡಿದರೆ ಆರ್ಥಿಕ ಸ್ಥಿತಿಗೆ ನೆಲೆಯೇ ಇಲ್ಲದೆ ಹೋಗತ್ತದೆ. ಎಕ್ಸೈಸ್ ಉತ್ಪತ್ತಿಯು ಹೆಚ್ಚು ಜಾಗರೂಕತೆಯಿಂದ ಅಂದಾಜು ಮಾಡಲಾಗಿದೆ. ಒಡ್ಜೆಟ್ಟಿನಲ್ಲಿ ತೋರಿಸಿರುವ ಅಂದಾಜು ಉತ್ಪತ್ತಿಗಿಂತ 9000 ರೂ ಕಡಿಮೆ ಮಾಡಬೇಕು, ಈಚೆಗೆ ಆದ ಮಾರಾಟದಿಂದ ಕಡಿಮೆ ಮಾಡಬೇಕಾಗಿ ಬಂದಿದೆ. ಸ್ಟಾಂಪಿನಲ್ಲಿ ಅತಿ ಕಡಿಮೆ ಉತ್ಪತ್ತಿ ತೋರಿಸಲಾಗಿದೆ, ಫಾರೆಸ್ಟಿನಲ್ಲಿ ಈ ವರ್ಷದ 100 ಟನ್ ಗಂಧದ ಬೆಲೆಯೂ ಸೇರಿಸಿದರೆ ಉತ್ಪತ್ತಿ ಹೆಚ್ಚು ತೋರಿಬರುತ್ತದೆ,

ಖರ್ಚು:—ರಿಟ್ರೆಂಚ್‌ಮೆಂಟ್ ಕಮಿಟಿಯ ಶಿಫಾರಸನ್ನು ಜಾರಿಗೆ ತಂದರೂ ಪ್ರಯಾಣದ ಭತ್ಯೆವಸ್ತು ಕಡಿಮೆ ಮಾಡಿದರೂ ಎಲ್ಲಾ ಬಾಬಿನ ಖರ್ಚುಗಳೂ ಹೆಚ್ಚಾಗಿವೆ, ಆದರೆ ಬಡ್ಜೆಟ್ಟನ್ನು ತಯಾರಿಸುವಾಗ ಸರಕಾರಿ ಉದ್ಯೋಗಸ್ಥರ ಸಂಬಳ 100 ಕ್ಕೆ 10 ರಷ್ಟು ಕಡಿಮೆ ಮಾಡಿದ್ದು ಪೂರ್ತಿಯಾಗಿ ಭರ್ತಿಮಾಡಿ ಕೊಡಲಾಗುವುದೆಂದು ಅಂದಾಜು ಮಾಡಲಾಗಿತ್ತು, ಆದರೆ ಇಂಡಿಯಾ ಸರಕಾರದ ಬರೇ ಶೇಕಡ 5 ರಷ್ಟು ಮಾತ್ರ ಭರ್ತಿಮಾಡಿಕೊಡಬಹುದೆಂತ ತೀರ್ಮಾನವನ್ನೇ ನಾವೂ ಅಂಗೀಕರಿಸಬೇಕಾಗಿದೆ, ಮದ್ರಾಸ್ ಸರಕಾರದವರಿಗೆ ಉಳಿವರಿ ಇರುವುದರಿಂದ ಅವರು ಪೂರ್ತಿ ಶೇಕಡ 10 ನ್ನೂ ಭರ್ತಿಮಾಡಿಕೊಡುತ್ತಾರೆ, ನಾವೂ ಹಾಗೆಯೇ ಮಾಡಲು ವಿನಸ್ಸಿದ್ದರೂ ನಮ್ಮ ಆರ್ಥಿಕ ಸ್ಥಿತಿಯ ದೆಸೆಯಿಂದ ಸಾಧ್ಯವಿಲ್ಲ, ಹೀಗೆ ಸಂಬಳದಲ್ಲಿ ಶೇಕಡ 5 ರಷ್ಟು ಖೋತೆ ಮಾಡುವುದರಿಂದ 15000 ರೂ, ಉಳಿಯುತ್ತದೆ, 100 ರೂ, ಗಿಂತ ಹೆಚ್ಚಿಗೆ ಸಂಬಳವಿರುವವರಿಗೆ ಈ ಶೇಕಡ 5 ರಷ್ಟು ಭರ್ತಿಮಾಡಿ ಕೊಟ್ಟದ್ದರಿಂದ ಪ್ರಯೋಜನವಾಗಲಿಲ್ಲ, ಯಾಕೆಂದರೆ ಅವರಿಗೆ ಉತ್ಪತ್ತಿ ಕಂದಾಯವನ್ನು ಮಾಫಿ ಮಾಡಿದ್ದನ್ನು ವಜಾಮಾಡಿದ್ದಾರೆ, ಪ್ರಾಂತೀಕ ಸರಕಾರಕ್ಕೆ ಖರ್ಚಾದದ್ದು ಇಂಡಿಯಾ ಸರಕಾರಕ್ಕೆ ಸಿಕ್ಕಿದಂತಾಗುತ್ತದೆ—

ಫೈನಾನ್ಸ್ ಕಮಿಟಿಯವರಿಗೆ ಶಿಫಾರಸು ಮಾಡಲು ಹೆಚ್ಚಿಗೆ ಹಣವೇ ಇರಲಿಲ್ಲ, ನಾವ್ಕೋಕ್ಕೆಗೆ ವೆಟರಿನರಿ ಆಸ್ಪತ್ರೆ ಬೇಕಂತ ಮಾಡಿದ ಶಿಫಾರಸನ್ನು ಅಂಗೀಕರಿಸಲಾಗಿದೆ, ಆ ಭಾಗದವರಿಗೆ ವೆಟರನರಿ ಸಹಾಯ ದೊರಯುತ್ತಿರಲಿಲ್ಲ, ಹಣ ದೊರೆಯುವ ವರೆಗೆ ಜಾಕಿ ಮಾಡಕೂಡದೆಂತ ತೋರಿದನ್ನು ಮಂಜೂರು ಮಾಡಲಾಗಿದೆ, ಈಗಿನ ಆರ್ಥಿಕ ಸ್ಥಿತಿಯು ಫೈನಾನ್ಸ್ ಕಮಿಟಿಗೆ ತಿಳಿದಿದ್ದರೆ ಫೈನಾನ್ಸ್ ಕಮಿಟಿಯವರು ಈಗ ಮಾಡಿದ ಶಿಫಾರಸು ಸಹ ಮಾಡುತ್ತಿರಲಿಲ್ಲ, ಆ ರಮನೆಯ ಕೆಲಸ ವ್ಯಾಪಾರಂಭಿಸಿದ್ದನ್ನು ತೀಘ್ರದಲ್ಲೇ ತೀರಿಸಬೇಕಾದದ್ದು ಅವಶ್ಯ, ಅವರ ಕೆಲಸ ತೀರಿದ ನಂತರ ಬೇರೆ ಬಾಬುಗಳಿಗೆ ಸ್ವಲ್ಪ ಹಣ ದೊರಯಬಹುದು, ಮಾವುಕಾಟದ ರಸ್ತೆಗೆ ಇಂಡಿಯಾ ಸರಕಾರವು ಪೆಟ್ರೋಲ್ ಟ್ಯಾಕ್ಸಿನಿಂದ ಕೊಟ್ಟ ಹಣಲಿಕೆಯಿಂದ ಖರ್ಚು ಮಾಡುತ್ತಿದ್ದೇವೆ, ರಸ್ತೆಗಳಿಗೆ ಅತಿ ಸ್ವಲ್ಪ ಹಣ ಖರ್ಚು ಮಾಡುತ್ತಿದ್ದೇವೆ, ಇದಕ್ಕಿಂತ ಕಡಿಮೆ ಮಾಡಲು ಸಾಧ್ಯವಿಲ್ಲ, ಒಟ್ಟು ಖರ್ಚು ರೂ, 13,83000 ಆಗುತ್ತದೆ, ವರ್ಷದ ಅಂತ್ಯದಲ್ಲಿ 38000 ರೂ, ಮಾತ್ರ ಉಳಿಯುತ್ತದೆ ಖಾಸೂನು ಮೇರೆ ಇರಬೇಕಾದ 50000 ರೂ, ಸಿಲ್ಕಿಗಿಂತ 120 0 ಕಡಿಮೆಯಾದಂತಾಯಿತ, ಈ ಉಳುವರಿಯನ್ನು ಉಪಯೋಗಿಸಲು ಇಂಡಿಯಾ ಸರಕಾರವನ್ನು ಕೇಳಿಕೊಳ್ಳಬೇಕಾಗಿದೆ,

ಮೆ, ಕೊಂಗಂಡ ಗಣಪತಿಯವರ ಭಾಷಣದ ಸಾರಾಂಶ:—

ಒಡ್ಜೆಟ್ಟನ್ನು ನೋಡಿದರೆ ಆಡಳಿತವು ಸರಿಯಾಗಿ ಆಗುತ್ತಿಲ್ಲವೆಂತ ಸ್ಪಷ್ಟವಾಗಿ ತೋರುತ್ತದೆ, ಪಾಪರಾಗುವಂತೆ ಕಾಣುತ್ತದೆ, ಈ ಕೌನ್ಸಿಲಿನಿಂದಲೇ ಈ ರೀತಿ ದುಸ್ಥಿತಿಯು ಬರಲು ಕಾರಣ, ಕೌನ್ಸಿಲ್ ಬರುವ ಮುಂಚೆ ಇಂಡಿಯಾ ಸರಕಾರವು ಉತ್ಪತ್ತಿಯಲ್ಲಿ ಉಳುವರಿ ಮಾಡುತ್ತಿತ್ತು, ಕೌನ್ಸಿಲ್ ಸರಕಾರ ಬಂದದ್ದರಿಂದ ಅಧಿಕಾರಿಗಳಿಗೆ ಅಧಿಕಾರ ಹೆಚ್ಚಾಯಿತು, ಜನರಿಗೆ ಜವಾಬ್ದಾರಿ ಕೊಡುವ ವರೆಗೆ ಪ್ರಯೋಜನವಿಲ್ಲ, ಇಂಡಿಯಾ ಸಂಕಾಶದ ತಾಬೆಯಲ್ಲಿ ಇರುವುದೇ ಮೇಲೆಂತ ತೋರುತ್ತದೆ, ಮೈಸೂರಿಗಾದರೂ ಸೇರುವುದು ಉತ್ತಮ, ಜನರಿಗೆ ಸ್ವತಂತ್ರ ಕೊಡದಿದ್ದರೆ ಮೈಸೂರಿಗೆ ಸೇರಿಸಿಬಿಡಿ, ಡಿಸ್ಟ್ರಿಕ್ಟ್ ಬೋರ್ಡಿಗೆ ಉದ್ಯೋಗಸ್ಥರಲ್ಲದ ಪ್ರೆಸಿಡೆಂಟನ್ನು ಕೊಟ್ಟದ್ದಕ್ಕೆ ಸಂತೋಷಪಡುತ್ತೇವೆ.

ಮೆ, ಎ, ಬಿ, ಜೋಗಪ್ಪನವರು:—

ಆಡಳಿತದಲ್ಲಿ ಇರುವ ಕೊರತೆಗಳ ಮೇಲೆ ಟೀಕಿಸಿದರೆ ಏನೂ ಪ್ರಯೋಜನವಾಗುವುದಿಲ್ಲ, ಬಡ್ಜೆಟ್ಟಿನ ಮೇಲೆ ಈ ಮೊದಲು ಮಾಡಿದ ಭಾಷಣಗಳಲ್ಲಿ ಕೊಟ್ಟ ಸಲಹೆಗಳಿಗೆ ಗಮನಿಸುವುದೇ ಇಲ್ಲ, ಅಂಥಾ ಸೂಚನೆಗಳಿಗಾಗಿ ಮಾಡಬೇಕಾದ ಅಲ್ಪ ಸ್ವಲ್ಪ ಖರ್ಚುಗಳನ್ನು ಸಹ ಮಾಡುವುದಿಲ್ಲ, ಕೃಷಿ ಅಭಿವೃದ್ಧಿಗಾಗಿ ಏನೂ ಮಾಡಲಿಲ್ಲ, ಕೃಷಿ ಉತ್ಪತ್ತಿ ಕಡಿಮೆ, ಬೆಲೆ ಇಲ್ಲ, ಕಂದಾಯದಲ್ಲಿ ಶೇಕಡ 10 ರಷ್ಟಾದರೂ ಕಡಿಮೆ ಮಾಡಿ, ಸಾಲಗಳ ಬಡ್ಡಿ ಕೊಡಲಿಕ್ಕೆ ಶಕ್ತಿ ಇಲ್ಲ, ವಾಯಿದೆ ಮೀರಿದ ಸಹಕಾರಿ ಸಾಲ ತುಂಬಾ ಇದೆ, ಭೂಮಿಯೇನೋ ಗಿರ್ವಿ ಇದೆ, ಭೂಮೂಲೀಕರು ಕೂಲಿಗೆ ಳಾಗುವ ಸಂಭವವಿದೆ, ರಿಜಿಸ್ಟ್ರಾರವರಿಗೆ ಮೇಲ್ವಿಚಾರಕ್ಕೆ ಸಮಯವಿಲ್ಲ, ಪೂರ್ತಿ ಸಮಯ ಸಹಕಾರಕ್ಕೆ ಕೊಡುವ ಅಧಿಕಾರಿಬೇಕು, ಇಲ್ಲವಾದರೆ ಕ್ರಮೇಣ ಭೂಮಿ ಧನಿಕರ ಪಾಲಾದೀತು, ಬ್ಯಾಂಕಿನವರು ಸಂಘಗಳ ಮೇಲೆ ಹೆಚ್ಚಿಗೆ ತೆರಿಗೆ ಹಾಕಿ ಒಂದು ಒಳಸಂಚಿನ ಗುಂಪು ಮಾಡಿಕೊಂಡು ಸೂಪರ್ ವೈಜರುಗಳನ್ನು ಉಪಯೋಗಿಸಿಕೊಂಡು ರಾಜೀನಾಮೆ ಕೊಟ್ಟ ಡೈರೆಕ್ಟರುಗಳು ಪುನಃ ಜುನಾಯಿತರಾದರು. ಕೌನ್ಸಿಲ್ ಜುನಾವಣೆಗೆ ಸಹಾಯ ತೆಗೆದುಕೊಳ್ಳಲಿಕ್ಕಾಗಿ ಹೀಗೆ ಮಾಡಿದ್ದಾಗಿದೆ,

ಸೀರಂ ಸೈಮಲ್ಟೇನಿಯಸ್ ಕ್ರಮದಿಂದ ಇನಾಕ್ಯುಲೇಶನ್ ಮಾಡುವುದು ಉಪಕಾರವೇ, ಆದರೆ ದೇಶಕ್ಕೆ ಬರುವ ದನಗಳಿಗೆ ಸಂಪಹದ್ದಿನಲ್ಲೇ ಇನಾಕ್ಯುಲೇಶನ್ ಮಾಡಬೇಕು, ಔಷಧಿ ಆರೋಗ್ಯದಲ್ಲಿ ನಾವು ಹಿಂದೆಯೇ ಇದ್ದೇವೆ, ವೀರರಾಜಪೇಟೆಯಲ್ಲಿ ಅಸಿಸ್ಟೆಂಟ್ ಸರ್ಜನ್ ಇಲ್ಲ, ಸರಿಯಾದ ಸಿವಿಲ್ ಸರ್ಜನ್ ಇಲ್ಲ, ವೀರರಾಜಪೇಟೆಯಲ್ಲಿ ಲೇಡಿ ಡಾಕ್ಟರ್ ಇಲ್ಲ, ವೀರರಾಜಪೇಟೆ ಸ್ಕೂಲಿಗೆ ಬೇಕಾದ ನೀರು, ದಾರಿ, ಮಕಾನಾದ ಅನುಕೂಲ ಮಾಡಿಕೊಡಲಿಲ್ಲ, ಮೋಟಾರ್ ಬಂಡಿಗಳಿಗೆ ತೆರಿಗೆ ಹಾಕಿದ್ದರಿಂದ ತುಂಬಾ ಕಷ್ಟವಿದೆ, ಪೊಲೀಸ್ ಇಲಾಖೆಯಲ್ಲಿ ಕೆಳಗಿನವರಿಗೆ ಪ್ರೊಮೋಶನ್ ಕೊಡುವುದೇ ಮುಖ್ಯವಾಗಿ ಇಟ್ಟುಕೊಳ್ಳಬಾರದು, ಹೊರಗಿನಿಂದ ತರಿಸಬೇಕು, ಬೆಂಗಳೂರಲ್ಲಿ ಚೀಫ್ ಕಮಿಶನರು ಆಫೀಸಿನಲ್ಲಿ ಕೊಡಗರನ್ನು ಯಾರನ್ನೂ ಇನ್ನೂ ನೇಮಿಸಲಿಲ್ಲ,

ಮೆ, ಯನ್, ಬಿ, ಸೋಮೆಯ್ಯನವರು:—

ರೈತರ ದುಸ್ಥಿತಿಯು ಹೆಚ್ಚಾಗಿದೆ, ಆಫೀಸರುಗಳು ಕಾರಿನಲ್ಲಿ ಹೋಗಿ ಬರುತ್ತಾರೆಯೇ ಹೊರತು ರೈತರ ಗೋಳು ತಿಳಿಯುವುದಿಲ್ಲ, ಮೆಲೇರಿಯಾ ಪರಿಹಾರಕ್ಕೆ ಇಟ್ಟ ಹಣ 6040 ರೂ, ಸಾಲದು, ಅರ್ಹರಾದ ಸಿವಿಲ್ ಸರ್ಜನರು ಇಲ್ಲದ್ದರಿಂದ ಮೈಸೂರು ಆಸ್ಪತ್ರೆಗಳಿಗೆ ಜನರು ಪ್ರವಾಹದಂತೆ ಹೋಗುವುದು, ಚೀಫ್ ಕಮಿಶನರ ಆಫೀಸಿಗೆ 16000 ರೂ, ಖರ್ಚಾದರೂ ಒಬ್ಬ ಕೊಡಗನಾದರೂ ಅಲ್ಲಿ ಇಲ್ಲ, ಕೃಷ್ಣಗಾಗಿ 600 ರೂ, ಖರ್ಚು ಮಾಡುವುದು ದಂಡ, ನಾವೂ, ಕ್ಷಿಗೆ ಪಶುವೈದ್ಯ ಆಸ್ಪತ್ರೆ ಕೊಟ್ಟದ್ದಕ್ಕೆ ವಂದಿಸುತ್ತೇವೆ, ಎಕ್ಸೈಸ್ ನೀತಿಯು ಸರಿಯಾಗಿದೆ, ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಸಾಲ ತೆಗೆದುಕೊಂಡ ಉದ್ದೇಶಕ್ಕೇನೇ ಹಣವು ಉಪಯೋಗವಾಗುತ್ತಿದೆಯೋ ಎಂತ ನೋಡುವುದಿಲ್ಲ, ದೊಡ್ಡ ದರ್ಜೆ ಅಧಿಕಾರದ ಸಂಬಳ ಕಡಿಮೆ ಮಾಡಬೇಕು, ಮೈಸೂರು ಸಂಸ್ಥಾನಕ್ಕೆ ಸೇರಿಯೇ ಈ ದೇಶದ ಉದ್ಧಾರವಾಗಬೇಕಷ್ಟೆ,

ವೆ, ತಿರುವೆಂಗಡು ಪಿಳ್ಳೆಯವರು:—

ಪೊಲೀಸ್ ಇಲಾಖೆಯ ವಿರುದ್ಧ ಟೀಕೆ ಮಾಡಿ, ಸರ್ಕಸ್ ಪಾಸ್ಪತ್ರಿನ ತೀರ್ಪಿನಂತೆ ಮೈಸೂರಿಗೆ ಸೇರಿಸಲು ಒಪ್ಪಿಗೆ ಕೊಟ್ಟರು,

ಮೆ, ಪಾಂಡಂಡ ಚಂಗಪ್ಪನವರು:—

ನ್ಯಾಯತೀರ್ಪಿನ ಗಜೆಟೆಡ್ ಉದ್ಯೋಗಸ್ಥರ ವರ್ಗವರ್ಗೀಯ ವಿಸಾರಿಡು ಆದೇತಂತ ಆತಿಸಲಾಗಿದೆ, ಬೋರ್ಡ್ ಕೋರ್ಟುಗಳ ಕೆಲಸವು ಸಂಪೂರ್ಣ ಅತ್ಯಪ್ತಿಯಾಗಿದೆ, ಸಬ್ ಜಡ್ಜ್ ಮತ್ತು ಮುನ್ಸೀಫರ ಸ್ಮಾಲ್‌ಕಾಸ್ ಅಧಿಕಾರವನ್ನು ತಿಳಿಸಬೇಕು, ಸಬ್ ಜಡ್ಜಯೇ ಟ್ರೆಜರಿ ಆಫೀಸರಾಗಿರುವುದು ಒಳ್ಳೆಯದಲ್ಲ, ಕೌನ್ಸಿಲ್ ರಿಪೋರ್ಟರ್ ಟ್ರೆಜರಿ ಆಫೀಸರಾಗಿರಬಹುದು, ಆಫೀಸರುಗಳ ಸಂಬಳ ಕಡಿಮೆ ಮಾಡಬೇಕು, ತಳಿಗೆ ದರ್ಜೆಯವರಿಗೆ ಸಹಾಯವಾಗುವಂತೆ ಕೆಲವು ದೊಡ್ಡ ಸಂಬಳದ ಅಧಿಕಾರಗಳನ್ನು ಹೊಸತಾಗಿ ಮಾಡಿಕೊಡಬೇಕು, ಕೊಟ್ಟಮುಡಿ, ಕಕ್ಕಬೆ ಶೇತುವೆಗಳನ್ನು ಮಾಡಿಕೊಡಬೇಕು, ಬೇತರಿ ಹುಂಗಾಮಿ ಸೇತುವೆ ಮಾಡಿಕೊಟ್ಟು ಪ್ರಯೋಜನವಿಲ್ಲ, ಖಾಯಂ ಸೇತುವೆ ಮಾಡಬೇಕು, ಮೋಟಾರ್‌ಗಾಡಿಗಳಿಗೆ ಕಂದಾಯ ಹಾಕಿದ್ದರಿಂದ ದೇಶೀಯ ಬಸ್ ಮಾಲೀಕರಿಗೆ ಕಷ್ಟವಾಗಿದೆ, ಮೈಸೂರಿಗೆ

ಮೆ. ಚೌ. ಕಾಳಪ್ಪನವರು:—

ಬಡ್ಜೆಟ್ಟಿನ ಮೇಲೆ ಕೆಲವು ಟೀಕೆಯೊಡಿ ಸರ್ವಪಕ್ಷ ಪರಿಷತ್ತಿನ ತೀರ್ಮಾನಕ್ಕೆ ವರ್ತಾಸೆಕೊಟ್ಟು ಅದರಂತೆ ಜಾರಿಮಾಡಬೇಕೆಂತ ಕೇಳಿದರು. ಜನರಿಗೆ ಸೆಮ್ಮನೆ ಆಶೆ ತೋರಿಸುತ್ತಾ ಏನೂ ಕೊಡದಿದ್ದರೆ ಪ್ರಯೋಜನವಿಲ್ಲ. ಎಂತ ವಗೈರೆಯೊಗಿ ಹೇಳಿದರು.

ಮೆ. ವೀರಭದ್ರಪ್ಪನವರು—ಸರ್ವಪಕ್ಷ ಪರಿಷತ್ತಿನ ತೀರ್ಮಾನದ ಮೇರೆ ಪೂರ್ಣ ಪ್ರಜಾಜವಾಬ್ದಾರಿ ಸರಕಾರ ಕೊಡಬೇಕು, ಅಥವ ಮೈಸೂರಿಗೆ ಸೇರಿಸಬೇಕೆಂತ ಹೇಳಿದರು.

ಮೆ. ಪಿ. ಯಂ ನಾಣೈಯ್ಯನವರು—ರೈತನ ಗೋಳನ್ನು ವಿವರಿಸಿ ರೈತನಿಗೆ ಕಂದಾಯ ಕಡಿಮೆ ಮಾಡಿಕೊಡಲೇಬೇಕು. ರೈತನಿಂದ ತೆಗೆದುಕೊಳ್ಳುವ ಕಂದಾಯಕ್ಕೆ ಅವನಿಗೆ ಯಾವ ಪ್ರತಿಫಲವನ್ನೂ ಕೊಡುವುದಿಲ್ಲ. ರೈತನಿಗೆ ಸಹಾಯ ಮಾಡುವ ಬದಲು ಕಂದಾಯಕ್ಕೆ ಜಪ್ತಿನು ಹರಾಜಾತದರೆ ಪುನಃ ಹರಾಜನ್ನು ರದ್ದುಮಾಡಲಾಗುವುದಿಲ್ಲವೆಂತ ಒಂದು ಸರ್ಕ್ಯೂಲರ್ ಕಳುಹಿಸಿದ್ದಾರೆಂತ ಕೇಳಿದ್ದೇನೆ. ಇದು ನಿಜವಾದರೆ ಸರಕಾರಕ್ಕೆ ಏನೇನೂ ಕನಿಕರವಿಲ್ಲವೆಂತಾಯಿತು. ಫಾರೆಸ್ಟ್ ಇಲಾಖೆಯವರು ಹೆಚ್ಚಿಗೆ ಗಂಧ ಕಡಿಯುತ್ತಿದ್ದಾರೆಂತ ಕೇಳಿದ್ದೇನೆ. ಇದನ್ನು ನಿಲ್ಲಿಸಲೇಬೇಕು. ರಸ್ತೆಗಳಿಗೆ ತಾರು ಹಾಕುವುದು ಪ್ರಯೋಜನಕಾರವೆಂತ ಖಂಡಿತ ಗೊತ್ತಾಗುವ ಮುಂಚೆ ಇದಕ್ಕೆ ಹೆಚ್ಚಿಗೆ ಖರ್ಚು ಮಾಡಬಾರದು. ರಿಟ್ರೆಂಚ್‌ಮೆಂಟ್ ಕಮಿಟಿಯ ತಿಫಾರಸ್ಸೆಲ್ಲಾ ಜಾರಿಗೆ ತಂದಿಲ್ಲವೆಂತ ತಿಳಿದಿದ್ದೇನೆ. ಹೀಗೆ ಮಾಡಬಾರದು. ಸಿವಿಲ್ ಸರ್ಜನ್ ಪದವಿಗೆ ಅರ್ಹರನ್ನು ನೇಮಿಸದಿರುವುದು ವಿಷಾದಕರ. ವಿದ್ಯಾ ಅನುಕೂಲತೆಗಳನ್ನು ಹೆಚ್ಚಿಸಿಕೊಡಬೇಕು. ಸಹಕಾರಿ ಸಂಘಗಳ ಕೆಲಸ ಜೆನ್ನಾಗಿಲ್ಲ. ಇದನ್ನು ಸರಿಪಡಿಸದಿದ್ದರೆ ರೈತರ ಭೂಮಿಯೆಲ್ಲಾ ಹೋದೀತು. ಸರಕಾರಿ ರಿಕಾರ್ಡ್ ರೂಮಿನಿಂದ ರಿಕಾರ್ಡು ಸಿಕ್ಕುವುದು ಕಷ್ಟವಾಗಿದೆ ಈ ತೊಂದರೆಯನ್ನು ಹೋಗಲಾಡಿಸುವ ಏರ್ಪಾಡು ಮಾಡಬೇಕು, ಕೊಡಗಿಗೆ ಇಂಡಿಯೂ ಸಂಕಾರದಿಂದ ಹಣದ ಸಹಾಯ ಪಡೆದು ಪೂರ್ತಿ ಜವಾಬ್ದಾರಿ ಸರಕಾರ ಕೊಡಬೇಕು. ಇದು ಸಾಧ್ಯವಿಲ್ಲದಿದ್ದರೆ ಮೈಸೂರಿಗೆ ಸೇರಿಸಬೇಕು ಎಂಬ ಸರ್ವಪಕ್ಷ ಪರಿಷತ್ತಿನ ತೀರ್ಮಾನವನ್ನು ಪುಷ್ಟೀಕರಿಸಿದರು. ಮದ್ಯಾಸಿಗಿಂತ ಮೈಸೂರೇ ಯಾಕೆ ಬೇಕು ಎಂಬದನ್ನು ಸಕಾರಣವಾಗಿ ವಿವರಿಸಿದರು. ಸರ್ವಪಕ್ಷ ಪರಿಷತ್ತಿನ ತೀರ್ಮಾನದಲ್ಲಿ ಸೂಚಿಸಿರುವ ಮೇರೆ ಅಧಿಕಾರಗಳಲ್ಲಿ ಬದಲಾವಣೆಯನ್ನೂ ಮಾಡಲಿಲ್ಲ. ಸರಕಾರಿ ದಬ್ಬಾಳಿಕೆಯನ್ನು ಎದುರಿಸುವ ಸ್ವಭಾವವು ಬ್ರಿಟಿಷರು ಕೊಡುವ ವಿದ್ಯೆ ಅವರ ಮೂಡರಿಯಿಂದ ಬಂದದ್ದಾಗಿದೆಯೆಂತ ವಗೈರೆಯೊಗಿ ಹೇಳಿದರು.

ಮೆ. ಹಂಡ್ಲಿ ಜನ್ನಮುಲ್ಲಪ್ಪನವರು:—ಬಡ್ಜೆಟ್ಟಿನಲ್ಲಿ ದೇಶ ಪ್ರಯೋಜನಕ್ಕೆ ಹಣ ಇಡಲಿಲ್ಲವೆಂತ ಹೇಳಿ ಪ್ರಯೋಜನ ಇಲ್ಲ. "ತಡೆಯಿರಿ" ಎಂತ ಹೇಳುತ್ತಾ ಆಶೆ ತೋರಿಸುವ ಬದಲು ಇಂಡಿಯೂ ಸರಕಾರದಿಂದ ಧನ ಸಹಾಯ ಪಡೆದು ಪೂರ್ತಿ ಜವಾಬ್ದಾರಿ ಸರಕಾರ ಮಂಜೂರುಮಾಡಬೇಕು. ಇಲ್ಲದಿದರೆ ದೊಡ್ಡ ಪ್ರಾಂತ್ಯಕ್ಕೆ ಸೇರಬೇಕು. ನನ್ನ ಪ್ರಾಂತ್ಯದವರಿಗೆ ಮೈಸೂರಿಗೆ ಸೇರಲಿಕ್ಕೇನೇ ಒಪ್ಪಿಗೆ—

ಮೆ. ಚೆಪ್ಪುಡಿರ ಪೂಮ್ಮಯ್ಯನವರು ಸಹ ಬಡ್ಜೆಟ್ಟಿನ ಮೇಲೆ ಸಲಹೆಗಳನ್ನು ಕೊಟ್ಟು ರಾಜಕೀಯ ವಿಚಾರದಲ್ಲಿ ಸರ್ವಪಕ್ಷ ಪರಿಷತ್ತಿನ ತೀರ್ಮಾನವನ್ನು ಜಾರಿಮಾಡಬೇಕೆಂತ ಕೇಳಿಕೊಂಡರು.

ಮೆ. ಬಲ್ಲಚಂಡ ಬೆಳ್ಯಪ್ಪನವರು:—ರೈತರ ಸ್ಥಿತಿಯು ಶೋಚನೀಯವಾಗಿದೆ ಸಂಕಾರದ ಉತ್ಪತ್ತಿ ಕಡಿಮೆಯಾದ್ದಕ್ಕೆ ರೈತರು ಜವಾಬ್ದಾರರಲ್ಲ—ಅಧಿಕಾರಿಗಳಿಗೆ ವಾಯಿದೆಗೆ ಮುಂದಾಗಿ ಭಡ್ತಿ ಕೊಡುವುದು ವಗೈರೆ ದುಂದು ಖರ್ಚಾಗುತ್ತಲಿದೆ ನಾವೋಕ್ಕಿನಲ್ಲಿ ಪಶುವೈದ್ಯಾಸ್ಪತ್ರೆಯಿಟ್ಟದ್ದಕ್ಕು ಮತ್ತು ಬೆಳ್ಳಿ ಮೂಡು ಶೇತುವೆಗೆ ಹಣ ಇಟ್ಟದ್ದಕ್ಕು ವಂದಿಸುತ್ತೇನೆ. ಆದಾಯ ವೆಚ್ಚದ ಸ್ಥಿತಿ ಹೀಗಾದರೆ ದೇಶದ ಅಭ್ಯುದಯಕ್ಕಾಗಿ ನಾವು ಬೇರೆ ಪ್ರಾಂತ್ಯಕ್ಕೇ ಸೇರಲೇಬೇಕು. ಇಂಡಿಯೂ ಸರಕಾರದಿಂದ ಧನ ಸಹಾಯ ಸಿಕ್ಕಲೇಬೇಕು. ಕೃಷಿ ಇಲಾಖೆಯೆಂತ ಹೆಸರು ಮಾತ್ರ ಇದೆ. ಇಂಡಿಯೂ ಸರಕಾರಕ್ಕೆ ಇಲ್ಲಿಯೂ ಕೃಷಿ ಇಲಾಖೆ ಇದೆ ಎಂತ ತಿಳಿಸಲಿಕ್ಕೆ ಮಾತ್ರ, ಈ ಕೆಲಸಕ್ಕೆ ಅರ್ಹರಲ್ಲದವರನ್ನು ನೇಮಿಸುತ್ತಾರೆ. ದೇಶೀಯರಾದ ಕೆಲವರಿಗೆ ಜೀವನದ ಅನುಕೂಲ ದೊರೆತಿದೆ ಎಂಬದೊಂದೇ ಸಮಾಧಾನ. ಸಹಕಾರಿ ಸಂಘಗಳಲ್ಲಿ ವಸೂಲಿ ಜೆನ್ನಾಗಿ ಆಗದಿರಲು ಒಳ್ಳೇ ಕೆಲ್ಸವಿಚಾರವಿಲ್ಲದಿರುವುದೇ ಕಾರಣ. ಸಾಲ ಕೊಡಲು ಶಕ್ತಿ ಇಲ್ಲದವರ ಭೂಮಿಯನ್ನು ವಹಿಸಿಕೊಂಡು ಸಾಲ ತೀರಿಸಿಕೊಳ್ಳಬೇಕು, ಇಲ್ಲವಾದರೆ ಭೂಮಾಲೀಕರೆಲ್ಲಾ ಕೂಲಿಗಳಾಗುವುದರಲ್ಲಿ ಸಂಶಯವಿಲ್ಲ. ಸಹಕಾರಿ ಚಳವಳವನ್ನು ಅಧಿಕಾರಿಗಳು ರಾಜಕೀಯ ಉದ್ದೇಶಗಳಿಗೆ ಉಪಯೋಗಿಸುತ್ತಾರೆಂತ ಕೇಳಿದ್ದೇನೆ: ಸರಕಾರದ ಸಹಾಯಕ್ಕಾಗಿ ಅಲ್ಲ. ತಮ್ಮ ಸ್ವಂತ ಉದ್ದೇಶಕ್ಕಾಗಿ, ಇಂಥಾದ್ದನ್ನು ನಿಲ್ಲಿಸಬೇಕು. ಮಲೇರಿಯಾ ಕೆಲಸಕ್ಕೆ ಇಬ್ಬರನ್ನು ಇಡಬೇಕು. ಮೂಲಂಬಿ ಒಳಿ ವ್ಯವಸಾಯಕ್ಕೆ ಜವಾನು ಕೂಟ್ಟ ಸಂಬಂಧವಾಗಿ ಇತ್ತೀಚೆಗೆ ಸರಕಾರದಿಂದ ಏನೂ ಸಹಾಯ ದೊರಕುತ್ತಿಲ್ಲ. ರಸ್ತೆಗಳು ಜೆನ್ನಾಗಿ ಇಲ್ಲ. ಹೊಳೆಗಳಿಗೆ ಖಾಯಂ ಸೇತುವೆ ಮಾಡಿಕೊಡಬೇಕು. ಪೊಲೀಸ್ ಇಲ್ಲಾಖೆಯ ಆಡಳಿತ ಜೆನ್ನಾಗಿಲ್ಲ. ಅಧಿಕಾರಿಗಳ ಜುಲುಂಗೆ ಎದುರಾದವರನ್ನೆಲ್ಲಾ ತೊಂದರೆಪಡಿಸುವುದೇ ಈ ಇಲಾಖೆಯ ಕೆಲಸವಾಗಿದೆ. ನಾನು ಸತ್ಯಾಗ್ರಹಿಗಳಿಗೆ ಆಶ್ರಯಕೊಡುತ್ತೇನೆಂತ ಸುಳ್ಳು ವರದಿ ಬರೆಯುತ್ತಾರೆ. ಅಧಿಕಾರಗಳಲ್ಲಿ ಏನಾದಾಗಬೇಕೆಂತ ಕೊಟ್ಟ ಸೂಚನೆಯನ್ನು ಜಾರಿಗೆ ತರಬೇಕು. ಸರ್ವಪಕ್ಷ ಪರಿಷತ್ತಿನವರು ಕೇಳಿಕೊಂಡ ಮೇರೆ ಪೂರ್ತಿ ಪ್ರಜಾಜವಾಬ್ದಾರಿ ಸರಕಾರ ಕ್ರಮವನ್ನು ಕೊಡಬೇಕು, ಇಲ್ಲವಾದರೆ ಮೈಸೂರಿಗೆ ಸೇರಿಸಬೇಕು, ಈ ಸಂಬಂಧವಾಗಿ ಕಳುಹಿಸಿದ ತರಾವನ್ನು ಚರ್ಚೆಗೆ ಬಿಡಬೇಕಿತ್ತು, ಜನರ ವರ್ತಾಸೆ ಸರಕಾರಕ್ಕೆ ಇರಬೇಕಾದರೆ ಜನರ ಕೋರಿಕೆಯನ್ನು ನೆರವೇರಿಸಬೇಕು,

ರಾವ್ ಸಾಹೇಬ್ ಶ್ರೀಪತಿರಾಯರು:—

ದೇಶದ ಆರ್ಥಿಕ ಸ್ಥಿತಿಯು ಅತ್ಯಂತ ಹೀನಾವಸ್ಥೆಯಲ್ಲಿದೆ, ಸರಕಾರವು ಕೊಡುವ ಸಹಾಯ ಸಾಲದು, ಸಶುವೈದ್ಯರುಗಳು ಗ್ರಾಮಾಂತರಗಳಿಗೆ ಸುತ್ತಿ ಬೋಧಿಸಬೇಕು, ಕೈಪಿ ಇಲಾಖೆಯಲ್ಲಿ ತರಬೇತಾಗದವನಿದ್ದಾನೆಂತ ಹೇಳಿ ಪ್ರಯೋಜನವೇನು? ಹಣವಿಲ್ಲದೆ ಇರುವುದೇ ಕಾರಣ, ಹಣವನ್ನು ಒದಗಿಸಿಕೊಡುವುದು ನಮ್ಮ ಕರ್ತವ್ಯ, ಕೃಷಿ ಅಭಿವೃದ್ಧಿಗೆ ಇಂಡಿಯೂ ಸರಕಾರವೇ ಹಣದ ಸಹಾಯ ಕೊಡಬೇಕು, ದೊಡ್ಡ ರಸ್ತೆಗಳು ತಾವಾಗಿಯೇ ಜೆನ್ನಾಗಿ ಆಗುತ್ತವೆ, ಗ್ರಾಮಾಂತರಗಳಿಗೆ ಹೋಗುವ ರಸ್ತೆಗಳಿಗೆ ಹೆಚ್ಚಿಗೆ ನಿಗಕೊಡಬೇಕು, ಗೇಣಿ ಮಲೆಗಳನ್ನು ಆಯಾ ಗ್ರಾಮಸ್ಥರಿಗೆ ಕೊಡಬೇಕು, 1883 ರಲ್ಲಿ ಮಲೆಗಳನ್ನು ಹರಾಜು ಮಾಡಲು ಏರ್ಪಾರಂಭಿಸಿದರು, ಆಗ ಗ್ರಾಮಸ್ಥರಿಗೇನೇ ಕೊಡುತ್ತಿದ್ದರು, 1900 ರಿಂದ ಹೊರಗಿನವರಿಗೂ ಕೊಡಲು ಏರ್ಪಾರಂಭಿಸಿದರು, ಹೊರಗಿನವರು ಮಲೆಗಳನ್ನು ದುರುಪಯೋಗಪಡಿಸುತ್ತಾರೆ, ಈಚೆಗೆ ಹೊರಗಿನವರು ತೆಗೆದುಕೊಳ್ಳದಂತೆ ಮಾಡಿದರೂ, ಸಹ ಬಂದೋಬಸ್ತು ಸಾಲದು, ಮೊದಲು 7 ವರ್ಷಕ್ಕೆ ಗೇಣಿ ವಾಯಿದೆ ಇಟ್ಟರು ಈಚೆಗೆ 21 ವರ್ಷ ಮಾಡಿದರು, ಗೇಣಿ ವಾಯಿದೆಯನ್ನು ಹೆಚ್ಚಿಸಬೇಕು, ತೋಟ ಕಡಿಯುವ ಏರಿಯವು 16 ಸೆಂಟಿಗೆ ಏಂಬರಾರಡೆಂತ ಇಟ್ಟಿರುವುದು ಕಷ್ಟ, ಅಷ್ಟರಲ್ಲಿ ಬೆಳಕು ಸರಿಯಾಗಿ ಸಿಕ್ಕದೆ ಗಿಡಬರುವುದಿಲ್ಲ, 25 ಸೆಂಟಿನ ವರೆಗೆ ತೋಟ ಮಾಡಲು ಬಿಡಬೇಕು,

~~ಹೆಚ್ಚಿನ ಜನಕ್ಕೆ ಬೇರೆಯಾಗಿಯೇ ಇರಲು ಅಪೇಕ್ಷಿಸುತ್ತಾರೆಂತ ಸನ್ನ ಅಭಿಪ್ರಾಯ,~~ ಬೇರೆ ಪ್ರಾಂತ್ಯದೊಂದಿಗೆ ಸೇರಬೇಕೆಂತಾದರೆ ಮದ್ಯಾಸಿಗೆ ಸೇರಬೇಕು, ಸಾವಿರಾರು ಜನರು ಸ್ವಾತಂತ್ರ್ಯಕ್ಕಾಗಿ ಜೈಲಿನಲ್ಲಿ ಕೊಳೆಯುತ್ತಿದ್ದಾರೆ, ಪ್ರಜಾಜವಾಬ್ದಾರಿ ಸರಕಾರವನ್ನು ಬಿಟ್ಟು ದೇಶೀಯ ರಾಜ್ಯಕ್ಕೆ ಒಳಗಾಗುವುದು ಸರಿಯಲ್ಲ, ಪಟ್ಟವಾಸಿಗಳು ಮಾತ್ರ ಮೈಸೂರಿಗೆ ಸೇರಬೇಕೆಂತ ಹೇಳುವುದು, ಗ್ರಾಮಾಂತರಗಳಲ್ಲಿ ಇರುವವರು ಹೀಗೆಯೇ ಬೇರೆ ಇರಬೇಕೆನ್ನುತ್ತಾರೆ, ಮೈಸೂರಿಗೆ ಸೇರಬೇಕೆನ್ನುವವರೂ ಸಹ ಹಾಗೆಂತ ಕೇಳಿ ಆದಷ್ಟು ಹೆಚ್ಚಿನ ಸುಧಾರಣೆ ಪಡೆಯಲು ಪ್ರಯತ್ನಿಸುವದಾಗಿದೆಯೆಂತ ನನಗೆ ತೋರುತ್ತದೆ, ಈ ಕೌನ್ಸಿಲಿನಿಂದ ಸರಕಾರದ ಆಡಳಿತವು ಬದಲಾಗುತ್ತಲಿದೆ—ಹೆಚ್ಚಿಗೆ ಅಧಿಕಾರ ದೊರತರೆ ಇನ್ನೂ ಪ್ರಯೋಜನವಾದೀತು, ಇಂಡಿಯೂ ಸರಕಾರದಿಂದ ಹಣ ಸಹಾಯ ಪಡೆಯಬೇಕು, ಒರುವ ವರ್ಷ ಬ್ರಿಟಿಷ್ ರಾಜ್ಯಕ್ಕೆ ಸೇರಿ ಒಂದು ನೂರು ವರ್ಷವಾದ ಉತ್ಸವ ಮಾಡಬೇಕು,

ಕಮಿಶನರ ಜವಾಬು—ಜರ್ಚೆಗಳು ತಪಶೀಲು ವಿಷಯಗಳನ್ನು ಕುರಿತು ಆಗಿವೆ, ಆಯಾ ತರಾವು ಬಂದಾಗ ಅವುಗಳನ್ನು ಯೋಚಿಸಬಹುದು, ಕೌನ್ಸಿಲಿನಿಂದ ಪ್ರಯೋಜನವಾಗಿದೆ, ಎಷ್ಟೋ ತರಾವುಗಳು ಅಂಗೀಕೃತವಾಗಿವೆ, ಬೇರೆ ಯಾವ ಪ್ರಾಂತ್ಯದ ಕೌನ್ಸಿಲಿನ ಅಭಿಪ್ರಾಯಕ್ಕೂ ಸರಕಾರವು ಇಷ್ಟೊಂದು ಗೌರವ ಕೊಡುವುದಿಲ್ಲ, ವೈದ್ಯ, ವಿದ್ಯೆ ಮತ್ತು ಪಶುವೈದ್ಯದಲ್ಲಿ ಈ ದೇಶವು ಮದ್ರಾಸಿಗಿಂತ ಮುಂದುವರಿದಿದೆ, ಮಲಬಾರಿನ ವಿರಿಯೂ ಜನ ಸಂಖ್ಯೆಯೂ ಕೊಡಗಿನ 25 ರಷ್ಟು ಇದ್ದರೂ ಅಲ್ಲಿ 4 ಯೂ 5 ಪಶುವೈದ್ಯ ಆಸ್ಪತ್ರೆಗಳಿವೆಯಷ್ಟೆ, ಪೊಲೀಸ್ ಇಲಾಖೆಯ ಮೇಲೆ ಮಾಡಿದ ಆಕ್ಷೇಪಣೆಗಳು ಯಾವುದೂ ನಿಜವಲ್ಲ, ಸರ್ವ ಪಕ್ಷವೆಂತ ಎನ್ನುವ ಪರಿಷತ್ತಿನ ತರಾವಿನಲ್ಲಿ ಒಂದಲ್ಲ ತುಂಬಾ ತರಾವುಗಳಿವೆ, ಆ ತರಾವಿನ ಮೊದಲನೇ ಭಾಗವನ್ನು ಜಾರಿ ಮಾಡಲು ಇಂಡಿಯೂ ಸರಕಾರವನ್ನು ಕೇಳಿಕೊಳ್ಳಲಾಗಿದೆ, ಆದರೆ ಇಂಡಿಯೂ ಸರಕಾರವು ಬೇರೆ ಪ್ರಾಂತ್ಯಗಳಿಗೆ ಸುಧಾರಣೆ ದೊರಕುವ ವರೆಗೆ ಕಾಯಬೇಕೆಂತ ತಿಳಿಸಿದ್ದಾರೆ, ಆದ್ದರಿಂದ ಇಲ್ಲಿ ರಾಜಕೀಯ ಚಳವಳ ನಡಿಸಬೇಕಾದ ಕಾಲ ಬಂದಿಲ್ಲ,

ಅನಂತರ ಡಿಸ್ಟ್ರಿಕ್ಟ್ ಬೋರ್ಡ್ ರೆಗ್ಯುಲೇಶನಿನಲ್ಲಿ ಗ್ರಾಮಾಂತರಗಳಲ್ಲಿ ಕೃಷಿಯಿಂದಲ್ಲದೆ ಬೇರೆ ಬಾಬಿನ ಉತ್ಪತ್ತಿ ಇರುವವರಿಗೆ ಕಂದಾಯ ಹಾಕಲು ಸಾಧ್ಯವಾಗುವಂತೆ ತಿದ್ದುಪಡಿ ಮಾಡುವ ಖಾನೂನನು, ನೆರೆ ಪ್ರಾಂತ್ಯಗಳಿಂದ ಕೊಡಗಿಗೆ ಬರುವ ವೋಟರ್ ಗಾಡಿಗಳಿಗೆ ಕಂದಾಯ ಹಾಕಲು ಸಾಧ್ಯವಾಗುವಂತೆ ಆ ಖಾನೂನಿನ ತಿದ್ದುಪಡಿಯ ಕ್ಕಿವಿ ಕೀಟಗಳ ಮತ್ತು ಸಸ್ಯಾದಿಗಳ ರೋಗಗಳ ಹರಡುವಿಕೆಯನ್ನು ತಪ್ಪಿಸಲು ಕೌನ್ಸಿಲು ಮುಂದೆ ಕಳೆದ ಅಧಿವೇಶನದಲ್ಲಿ ಬಂದ ಬಿಲ್ಲು ಸಹ ಚರ್ಚೆಯಿಲ್ಲದೆ ಹದಿನೈದು ನಿಮಿಷಗಳೊಳಗೆ ಖಾನೂನಾಗಿ ಮಂಜೂರಾದವು,

ಅನಂತರ ರಾವ್‌ಸಾಹೇಬ್ ಬಿ, ಶ್ರೀಪತಿರಾಯರು ಚೀಫ್ ಕಮಿಶನರಿಗೆ "ಸರ್" ಎಂತ ಟೈಟಲ್ ಕೊಟ್ಟದ್ದಕ್ಕೆ ಸಂತೋಷವನ್ನು ಸೂಚಿಸಿದರು, ಇದಕ್ಕೆ ಮೆ, ಬಲ್ಲಚಂಡ ಬೆಳ್ಯಪ್ಪನವರೂ, ನಿಕಲ್ಸರೂ, ಎ, ಬಿ, ಚಂಗಪ್ಪನವರೂ ಸಮ್ಮತಿಸಿದರು.

ಅನಂತರ ಕಾಫಿ ಕಳುವಿನ ತಡೆ ಖಾನೂನನ್ನು ಒಳ್ಳೆಮೆಣಸು, ಯಾಲಕ್ಕಿಗೂ ಸಹ ವ್ಯಾಪಕವಾಗುವಂತೆ ಖಾನೂನು ಮಾಡಬೇಕೆಂತ ಮೆ, ಎ, ಇ, ಜೆ ನಿಕಲ್ಸರು ತಂದ ಸೂಚನಾರ್ಥದ ತರಾವಿಗೆ ಸರಕಾರದ ಸಹಾನುಭೂತಿ ದೊರೆತು ವಾಪಸು ತೆಗೆದುಕೊಳ್ಳಲಾಯಿತು,

ತಾ, 11—3—33 ರಲ್ಲಿ ನಡೆದ ಕಾರ್ಯಕ್ರಮಗಳು ಭೂಮಿ ಕಂದಾಯದಲ್ಲಿ ಶೇಕಡ 25 ರಷ್ಟು ಕಡಿಮೆ ಮಾಡಬೇಕೆಂತ ಮೆ, ಪಿ, ಯಂ, ನಾಣೈಯ್ಯನವರು ಕಳುಹಿಸಿದ ತರಾವಿನಲ್ಲಿ 12½ ಯಷ್ಟು ಎಂತ ಬದಲಾಯಿಸಿಕೊಂಡು ತರಾವನ್ನು ಸಭೆಯ ಮುಂದೆ ಇಡುತ್ತಾ ಮದ್ರಾಸ್ ಕೌನ್ಸಿಲಿನಲ್ಲಿ ಈ ತರಾವು ಚರ್ಚೆಯಾಗಿ ಒಮ್ಮತದಿಂದ ಮಂಜೂರಾಗಿದೆ, ರಿಸ್ಕ್‌ಗಳ ಅನುಕೂಲ ಕಡಿಮೆ, ದನ ಕರುಗಳ ಸಾವು ಹೆಚ್ಚು, ಭೂಮಿಯಲ್ಲದೆ ಬೇರೆ ಉತ್ಪತ್ತಿ ದಾರಿಯಿಲ್ಲ, ಈ ರೈತರು ಸಾಲದಲ್ಲಿ ಮುಳುಗಿದ್ದಾರೆ, ಉತ್ಪತ್ತಿ ಕಡಿಮೆ, ಬೆಲೆ ಇಲ್ಲ, ಮರೆನಾಡಿನಂಥ ಮೂಲೆಗಳಲ್ಲಿ ಗಾಡಿಗೆ 18 ರೂ. ಕ್ಕಯ, ಯಾಲಕ್ಕಿ, ಮೆಣಸು, ಕಾಫಿಯೂ ಹೀಗೆಯೇ ಸೆಟಲ್‌ಮೆಂಟ್ ಆದನಂತರ ತೆರಿಗೆಗಳು ಹೆಚ್ಚಾಗಿವೆ, ಸರ್ಕಾರಿ ಉದ್ಯೋಗಸ್ಥರಿಗೆ ವಜ ಆಗಿರುವ ಶೇಕಡ 10ರಷ್ಟು ಸಂಬಳದಲ್ಲಿ 5ರಷ್ಟು ಪುನಃ ಕೊಡುತ್ತೀರಿ, ಇದರಿಂದ 15,000 ರೂ, ಉಳಿಯುತ್ತದೆ, ಉಳಿದ ಹಣವನ್ನು ಹೇಗಾದರೂ ಭರ್ತಿಮಾಡಿಕೊಂಡು ಕಂದಾಯ ಕಡಿವೆ ಮಾಡಬೇಕು ಎಂತ ಹೇಳಿದರು,

(ಮುಂದುವರಿಯುವುದು)

ಚೀಫ್ ಕಮಿಷನರವರು ಮಾಡಿದ ಭಾಷಣ.

(2ನೇ ಪುಟದಿಂದ ಮುಂದುವರಿದದ್ದು)

1933—34ನೇ ವರ್ಷದ ಬಡ್ಜೆಟ್ಟು ಕೌನ್ಸಿಲಿನಲ್ಲಿ ಮಂಜೂರಾದನಂತರ ಈ ವಿಷಯವಾಗಿ ಚೀಫ್ ಕಮಿಷನರು ಪುನಃ ಬರೆಯುತ್ತಾರೆ:"

ರಿಟ್ರೆಂಚ್‌ಮೆಂಟ್ ವಗೈರೆ ಕಮಿಟಿಗಳಲ್ಲಿ ಈ ಕೌನ್ಸಿಲಿನ ಮೆಂಬರುಗಳು ಸರ್ಕಾರಕ್ಕೂ ತಮ್ಮ ದೇಶಕ್ಕೂ ಒಳ್ಳೇ ಸಲಹೆಗಳನ್ನು ಮಾಡಿದ್ದಾರೆ, ಕೌನ್ಸಿಲಿನಲ್ಲಿ ಎಷ್ಟೋ ತರ್ಜುಮೆಗಳನ್ನು ಮಂಜೂರು ಮಾಡಿದರೆ, ಕೆಲವು ಅಂಗೀಕರಿಸಲ್ಪಟ್ಟವು, ಕೆಲವು ಅಂಗೀಕಾರವಾಗದಿದ್ದರೂ ಸರ್ಕಾರದ ಪರಿಣಾಮ ಉಂಟು ಮಾಡಿವೆ, ಕೌನ್ಸಿಲಿನಲ್ಲೂ ಹೊರ ಈ ಕೌನ್ಸಿಲಿನ ಮೆಂಬರುಗಳು ಹೇಳಿದ ಮಾತಿಗೆ ನಾನೂ ಆಫೀಸರುಗಳೂ ಕಿವಿ ಕೊಟ್ಟಿದ್ದಾರೆ, ಒಟ್ಟಿನ ಮೇಲೆ ಕೌನ್ಸಿಲಿನಿಂದ ಪ್ರಯೋಜನಗಳು ತುಂಬಾ ಆಗಿವೆ,

ಕೊಡಗಿನ ಭವಿಷ್ಯತ್ತಿನ ಕುರಿತು ಕೆಲವು ಮಾತಾಡಬೇಕಾಗಿದೆ, ನಾನು ಹೇಳುವುದರಲ್ಲಿ ಯಾರಿಗೂ ನೋವನ್ನುಂಟುಮಾಡುವ ಅಭಿಪ್ರಾಯವು ನನಗಿಲ್ಲವೆಂತ ನಂಬಿರಿ, ಇಲ್ಲಿ ಇರುವವರು ಯಾರಾದರೂ ಅಥವಾ ಯಾವ ಪಾರ್ಟಿಗೆ ಸೇರಿದ ಇತರರು ಯಾರಾದರೂ ಈ ಸಮಸ್ಯೆಯಲ್ಲಿ ಭಾಗ ತೆಗೆದುಕೊಂಡವರು ತಮ್ಮ ದೇಶದ ಮೇಲಿನ ಪ್ರೀತಿಯಿಂದಲೇ ತಮ್ಮ ದೇಶದ ಅಭ್ಯುದಯಕ್ಕಾಗಿಯೇ ಕೆಲಸ ಮಾಡುತ್ತಾರೆಯೇ ಹೊರತು ಅನ್ಯಥಾ ಅಲ್ಲ ಎಂತ ನನಗೆ ಜೆನ್ನಾಗಿ ಗೊತ್ತಿದೆ, ಕೆಲವರ ಅಭಿಪ್ರಾಯಕ್ಕೆ ನಾನು ಒಪ್ಪವಿದ್ದರೆ ನಾನು ಸಹ ಅವರ ದೇಶದ ಪ್ರೀತಿಯಿಂದಲೇ ಆಗಿರುವದಾಗಿದೆಯೆಂತ ಅವರು ತಿಳಿಯಬೇಕು,

ಕೊಡಗಿನ ಭವಿಷ್ಯತ್ತನ್ನು ಕುರಿತು ಮೂರು ಅಭಿಪ್ರಾಯಗಳಿವೆ,

(1) ಕೊಡಗು ಪ್ರತ್ಯೇಕವಾಗಿಯೇ ಇರಬೇಕೆನ್ನುವವರು

(2) ಮದ್ರಾಸಿನೊಂದಿಗೆ ಯಾ ಮೈಸೂರಿನೊಂದಿಗೆ ಸೇರಿಕೊಳ್ಳಬೇಕೆನ್ನುವವರು,

ಪ್ರತ್ಯೇಕವೋ, ಸೇರುವಿಕೆಯೋ ಯಾವುದು? ಮದ್ರಾಸಿಗೆ ಯಾ ಮೈಸೂರಿಗೆ ಸೇರುವುದರಲ್ಲಿ ಯಾವುದು ಮೇಲು ಯಾವುದು ಕೀಳು ಎಂಬದನ್ನು ನಾನು ಚರ್ಚಿಸುವುದಿಲ್ಲ, ಕೊಡಗು ಬೇರೆ ಪ್ರಾಂತ್ಯದೊಂದಿಗೆ ಸೇರಬೇಕೆಂತಲೇ ಆದರೆ ಕೊಡಗಿನ ಅದೃಷ್ಟವು ಜೆನ್ನಾಗಿಯೇ ಇದೆ, ಸರಿಯೂದ ಚುನಾವಣೆಯೇ ಮಾಡಿಯೂರೆಂಬದರಲ್ಲಿ ಸಂಶಯವಿಲ್ಲ, ಈಗಿನ ಬ್ರಿಟಿಷ್ ಇಂಡಿಯೂ ಪ್ರಾಂತ್ಯಗಳಲ್ಲಿ ಅತಿ ಸುಭಿಕ್ಷವಾಗಿರುವ ಪ್ರಾಂತ್ಯವೊಂದು ಅಂದರೆ ಮದ್ರಾಸ್ ದೇಶೀಯ ರಾಜ್ಯಗಳಲ್ಲಿ ಅತ್ಯುತ್ತಮವಾಗಿ ಆಳಲ್ಪಡುತ್ತಿರುವುದೆಂತ ನಾನು ಧೈರ್ಯವಾಗಿ ಹೇಳಬಲ್ಲೆನಾದ ದೇಶೀಯ ರಾಜ್ಯ ಒಂದು, ಅಂಥಾದರೆ ಮೈಸೂರು ಅಷ್ಟರಲ್ಲೇ ಬಿಡುತ್ತೇನೆ, ಯಾವುದರೊಂದಿಗೂ ಸೇರಲು ಇಂಡಿಯೂ ಸರ್ಕಾರವು ಸುಲಭವಾಗಿ ಒಪ್ಪಲಾರದೆಂತ ನನ್ನ ಬಲವಾದ ಅಭಿಪ್ರಾಯವಾಗಿದೆಯೆಂತಸ್ಪಷ್ಟವಾಗಿ ತಿಳಿಸಬೇಕಾಗಿದೆ, ಹಾಗೆ ಸೇರಿಕೊಳ್ಳುವುದು ಅವಶ್ಯವೆಂಬದಕ್ಕೆ ಬಹಳ ಬಲವಾದ ಕಾರಣಗಳು ಬೇಕು, ದೇಶದಲ್ಲಿ ತುಂಬಾ ಹೆಚ್ಚಿನ ಬಹು

ಗೆ ಸ್ವತಂತ್ರವಾಗಿದ್ದ ಕೊಡಗು ಈಗ ತನ್ನ ಗೌರವಯುಕ್ತವಾದ ವ್ಯಕ್ತಿತ್ವವನ್ನು ಬಿಟ್ಟು ತನ್ನ ಜನರ ಕೋರಿಕೆ ಮೇರೆ ಅನ್ಯಾಂತ್ಯದ ಚಿಕ್ಕ ಭಾಗವಾಗಿ ಸೇರಿಕೊಳ್ಳುವ ಅವಶ್ಯಕತೆ ಬಂದಿದೆಯೋ ? ಅವಶ್ಯವಿದೆಯೆಂತ ನಾನು ನಂಬುವುದಿಲ್ಲ.

ಕೊಡಗಿಗೆ ಮುಂದೆ ಯಾವ ರಾಜಕೀಯ ಭವಿಷ್ಯತ್ತಿದೆಯೆಂತ ನಾನು ಈಗ ಹೇಳಲು ಸಾಧ್ಯವಿಲ್ಲ, ಆದರೆ ಬೇರೆ ಅನ್ಯಾಂತ್ಯದೊಂದಿಗೆ ಸೇರಿದರೆ ಯಾವ ಪ್ರಯೋಜನವಾದರೂ ಆದೀತೆಂತ ನನಗೆ ನಂಬಲು ಸಾಧ್ಯವಿಲ್ಲ. ದೊಡ್ಡ ಅನ್ಯಾಂತ್ಯಗಳಿಗೆ ಏನು ದೊರಕುತ್ತದೆಯೆಂತಲೂ, ದೊರಕಿದ್ದು ಹೇಗೆ ನಡೆಯುತ್ತದೆಯೆಂತಲೂ ನೋಡುವ ಮುಂಚೆ ಕೊಡಗಿನ ಭವಿಷ್ಯತ್ತನ್ನು ಯೋಚಿಸಬೇಕಾದದ್ದಿಲ್ಲವೆಂತ ನನ್ನ ಅಭಿಪ್ರಾಯವೆಂತ ನಿಮಗೆ ತಿಳಿದಿದೆ, ಈಗಲೂ ಅದೇ ಅಭಿಪ್ರಾಯವಾಗಿದೆ. ಆದರೂ ಸಮಯ ಬಂದಾಗ ಎಷ್ಟರ ಮಟ್ಟಿಗೆ ಮುಂದರಿಸಲು ಸಾಧ್ಯವಿದೆಯೆಂತ ಅಜಮಾಯಿಸುವುದು ಪ್ರಯೋಜನಕರವಾದೀತೆಂತ ಯೋಚಿಸಿ ಆ ಬಗ್ಗೆ ಒಂದು ಕಮಿಟಿಯನ್ನು ನೇಮಿಸಬೇಕೆಂತ ಸೂಚಿಸಿದೆ. ಆದರೆ ಅಂಥಾ ಕಮಿಟಿಯನ್ನು ನೇಮಿಸುವ ಕಾಲ ಇನ್ನೂ ಬಂದಿಲ್ಲವೆಂತ ಇಂಡಿಯಾ ಸರ್ಕಾರದ ಅಭಿಪ್ರಾಯವಾಗಿದೆ. ಆದರೆ ಕೊಡಗಿನ ಜನರಿಗೆ ತಮ್ಮ ಅಭಿಪ್ರಾಯವನ್ನು ಕೊಡಲು ಅವಕಾಶ ಕೊಡದೆ ಈಗಿನ ರಾಜಕೀಯ ರಚನೆಯನ್ನು ವ್ಯತ್ಯಾಸ ಮಾಡುವುದಿಲ್ಲವೆಂತ ಮೆಂಬರುಗಳು ನಂಬಿಕೆಯಿಂದ ಇರಬಹುದು,

ರಾಜಕೀಯ ರಚನೆಯನ್ನು ಬದಿಗಿಟ್ಟು ಆರ್ಥಿಕ ಕಾರಣದಿಂದಲೇ ಕೊಡಗನ್ನು ಬೇರೆ ಅನ್ಯಾಂತ್ಯದೊಂದಿಗೆ ಸೇರಿಸಬೇಕಾಗುತ್ತದೆಯೆಂತಲೂ ಬೇರೆಯಾಗಿರಲು ಸಾಧ್ಯವಿಲ್ಲವೆಂತಲೂ ಹೇಳುವವರು ಇದ್ದಾರೆ. ಈಗ ಕೊಡಗಿನ ಆರ್ಥಿಕ ಸ್ಥಿತಿಯು ಅತ್ಯಂತ ಹೀನಾವಸ್ಥೆಯಲ್ಲಿದೆಯೆಂತಲೂ ದೇಶಕ್ಕೆ ಅವಶ್ಯವಿರುವ ಸಾಧಾರಣ ಕೆಲಸಗಳನ್ನು ಸಹ ಮಾಡಲು ಸಾಧ್ಯವಿಲ್ಲವಾಯಿತೆಂತಲೂ, ಅಭಿವೃದ್ಧಿಗೆ ಅವಶ್ಯವಿರುವ ಎಲ್ಲಾ ಯೋಜನೆಗಳನ್ನೂ ಮೂಲೆಗೆ ಇಡಬೇಕಾಯಿತೆಂತಲೂ ನಮಗೆಲ್ಲರಿಗೂ ತಿಳಿದಿದೆ, ದೇಶಕ್ಕೆ ಅವಶ್ಯವಿರುವ ಕೆಲಸಗಳ ಉದ್ದ ಪಟ್ಟಿಯೊಂದನ್ನು ತಯಾರಿಸಬಹುದು. ಅವುಗಳನ್ನು ಜಾರಿ ಮಾಡಲು ಹಣವಿಲ್ಲದ್ದರಿಂದ ಮೂಲೆಗೆ ಇಡಲಾಗಿದೆ, ಅನೇಕರಿಗೆ ಧೈರ್ಯಗೆಟ್ಟರೆ ಆಶ್ಚರ್ಯವಿಲ್ಲ, ಆದರೆ ಮೆಂಬರುಗಳೂ ದೇಶದವರೂ ಧೈರ್ಯತಾಳಬೇಕೆಂತ ಕೇಳಿಕೊಳ್ಳುತ್ತೇನೆ. ದಕ್ಷಿಣ ಆಫ್ರಿಕ ಯುದ್ಧದಲ್ಲಿ ಬ್ರಿಟಿಷರಿಗೆ ಒಂದರ ಮೇಲೊಂದು ಸೋಲಾಗುತ್ತಿದ್ದಾಗ್ಯೆ ಆಗಿನ ಮಂತ್ರಿಯಾಗಿದ್ದ ಮೆ. ಬಾಲ್ ಫೋರಂ ವಿಕ್ಟೋರಿಯಾ ರಾಣಿಯನ್ನು ನೋಡಲಿಕ್ಕೆ ಹೋಗಿ ಬ್ರಿಟಿಷರಿಗೆ ಸೋಲಾಗಬಹುದೆಂತ ಸೂಚಿಸಿದ್ದಕ್ಕೆ ರಾಣಿಯವರು 'ಸೋಲಾದೀತೆಂತ ಯೋಚಿಸುವವರು ಇಲ್ಲಿ ಯಾರೂ ಇಲ್ಲ. ಎಂತ ಉತ್ತರ ಕೊಟ್ಟರು, ಹಾಗೆಯೇ ಕೊಡಗಿನಲ್ಲೂ ಬೇರೆ ಅನ್ಯಾಂತ್ಯದೊಂದಿಗೆ ಸೇರಬೇಕೆನ್ನುವುದು ಸೋಲಿನ ಮನೋಭಾವ; ಆ ಭಾವ ಇರಬಾರದು. ಕತ್ತಲು ಕವಿದ ದಿನಗಳು ನಿಲ್ಲುವುದಿಲ್ಲ. ನಮ್ಮ ಆರ್ಥಿಕ ಸ್ಥಿತಿಗೆ ಕಾರಣವಾದ ಪ್ರಪಂಚ ಸ್ಥಿತಿಯು ಉತ್ತಮವಾಗುವುದರಲ್ಲಿ ಸಂಶಯವಿಲ್ಲ, ಈಗಲೇ ಮುಖ್ಯವಾಗಿ ಹಿಂದೂಸ್ಥಾನದಲ್ಲಿ ಪ್ರಕಾಶ ತೋರಿಬರುತ್ತದೆ, ಆರ್ಥಿಕ ಭದ್ರತೆಯನ್ನು ಪಡೆಯುವ ದೊಡ್ಡ ದೇಶಗಳಲ್ಲಿ ಹಿಂದೂಸ್ಥಾನವೇ ಮೊದಲನೆಯದಾಗಬಹುದೆಂತ ನನ್ನ ಅಭಿಪ್ರಾಯ, ಅಂಥಾ ಸಮಯ ಬಂದಾಗ ಕೊಡಗಿನ ಕಷ್ಟಗಳೂ ಪರಿಹಾರವಾಗುತ್ತವೆ, ದೇಶವೇನೂ ಬದಲಾಗಿಲ್ಲ, ಜನರ ಮನೋಭಾವವೂ ಬದಲಾಗಿದೆಯೆಂತ ನಾನು ನಂಬುವುದಿಲ್ಲ, ಈ ರೀತಿ ನಿರಾಶೆಯೊಗಲು ಕಾರಣ ನನಗೆ ತೋರುವುದಿಲ್ಲ, ಪ್ರಪಂಚಿಕ ಆರ್ಥಿಕ ಸ್ಥಿತಿಯು ಹಾಳಾಗುವ ಮುಂಚೆ ಕೊಡಗಿನ ಸಾಂಪತ್ತಿಕ ಸ್ಥಿತಿಯು ಚೆನ್ನಾಗಿತ್ತು, ಇಂಡಿಯಾ ಸರ್ಕಾರವು ಕೊಡಗಿನಿಂದ ತುಂಬಾ ಫಾಯಿದೆ ಮಾಡಿಕೊಂಡಿದೆಯೆಂತ ನೀವೇ ವಾದಿಸುತ್ತೀರಿ, ಆದರೆ ಕೊಡಗಿನ ಹಿತ ಚಿಂತನೆಯನ್ನು ಇಂಡಿಯಾ ಸರ್ಕಾರವು ಮರೆತ್ತಿತೆಂತ ಯಾರೂ ಹೇಳುವುದಿಲ್ಲ, ದೇಶವು ಇಂಡಿಯಾ ಸರ್ಕಾರದ ತಾಬೆಯಲ್ಲಿದ್ದಾಗ ದೇಶವು ಚೆನ್ನಾಗಿತ್ತೆಂತ ಮೊನ್ನೆ ತಾನೇ ಒಬ್ಬ ಮೆಂಬರು ವ್ಯಸನದಿಂದ ಹೇಳಿದರು, ಈಗಲೂ ದೇಶದ ಆಡಳಿತಕ್ಕೆ ಮೊದಲಿನಂತೆಯೇ ಇಂಡಿಯಾ ಸರ್ಕಾರವೇ ಜವಾಬ್ದಾರಿಯಾಗಿದೆಯೆಂತಲೂ ಆಗಿನ ಆಡಳಿತ ಕ್ರಮವೇ ಈಗಲೂ ಇದೆಯೆಂತ ನಾನು ಜ್ಞಾಪಿಸಿಕೊಡಬೇಕಾಗಿದೆ. ಈ ಕೌನ್ಸಿಲಿನ ಮೊದಲನೇ ಆರು ವರ್ಷಗಳಲ್ಲಿ ಆರು ಲಕ್ಷ ರೂಪಾಯಿಗಳು ಉಳುವರಿ ಮಾಡಲು ಕೊಡಗು ಸರ್ಕಾರಕ್ಕೆ ಸಾಧ್ಯವಾಯಿತು, ಈಗ ಮೂರು ವರ್ಷಗಳಿಂದ ಕಾಲ ಕೆಟ್ಟಿದೆಯಷ್ಟೆ, ಅದಕ್ಕೆ ನಾವು ಜವಾಬ್ದಾರರಲ್ಲ, ಇವೆಲ್ಲಾ ಮುಂದಕ್ಕೆ ಒಟ್ಟೇದಾದೀತೆಂತ ಸೂಚಿಸುತ್ತದೆ, ಮೊದಲಿದ್ದಂತೆಯೇ ಇನ್ನು ಮುಂದೆಯೂ ಆಗುತ್ತದೆ, ಹಾಗೆ ಆಗುವಂತೆ ಮಾಡುವ ಕೆಲಸ ನಮ್ಮದು ಅಂದರೆ ಸರ್ಕಾರದ ಮತ್ತು ಜನರದ್ದಾಗಿದೆ, ಸೋಲಿನ ಮನೋಭಾವವನ್ನು ದೂರ ಮಾಡಿರಿ, ಎದೆಗುಂದಲು ಒಪ್ಪುವುದಿಲ್ಲವೆಂತ ನಿರಾಕರಿಸಿ ವಿಕ್ಟೋರಿಯ ಮಹಾರಾಣಿಯ ಮನೋಭಾವವನ್ನು ತುಂಬಿಕೊಳ್ಳಿರಿ, ಕೊಡಗು ತನ್ನ ಚುನ್ನಾದ್ದ ಹಕ್ಕನ್ನು ಸುಲಭದಲ್ಲಿ ಬಿಟ್ಟದೆಯೆಂತ ನೀವು ಯೋಚಿಸುತ್ತೀರೋ ? ಅಂಥಾ ಯೋಚನೆಯು ಕೊಡಗಿನಲ್ಲಿ ಯಾರಿಗೂ ಇರಬಾರದು, ಎಂಥಾ ಕಷ್ಟಗಳಿದ್ದರೂ ಅವನ್ನು ನಿವಾರಿಸಿಕೊಂಡು ಆದರೆ ಕೊಡಗು ಕೊಡಗಾಗಿಯೇ, ನಿಮ್ಮ ಪೂರ್ವಜರು ಕೊಟ್ಟ ಕೊಡಗಾಗಿಯೇ ಇನ್ನು ನೂರಾರು ವರ್ಷಗಳಿಂದ ಜನಾಂಗದ ಮಾತೃಭೂಮಿಯಾಗಿಯೇ ಇರಬೇಕೆಂತ ದೃಢ ನಿಶ್ಚಯ ಮಾಡಿರಿ, ನಿಮ್ಮ ಪ್ರಯತ್ನ ನೀವು ಮಾಡಿ, ಇನ್ನೇನೂ ಮಾಡಲಿಕ್ಕಾಗುವುದಿಲ್ಲವೆಂತಾದರೆ ಪ್ರಪಂಚದ ಸ್ಥಿತಿಯು ಇನ್ನೂ ನಿಮಗೆ ವಿರೋಧವಾಗಿದ್ದರೆ, ನಿಮ್ಮ ವ್ಯಕ್ತಿತ್ವವನ್ನು ಉಳಿಸಲು ಸಹಾಯ ಬೇಕಾದರೆ ಇಂಡಿಯಾ ಸರ್ಕಾರವು ನಿಮ್ಮ ಸಹಾಯಕ್ಕೆ ಬರುತ್ತದೆಯೆಂತ ಹೇಳಲು ನನಗೆ ಸಂಶಯವಿಲ್ಲ, ಸರ್ವ ಪ್ರಯತ್ನದಿಂದಲೂ ಕೊಡಗು ಬೇರೆ ಇರಲು ಸಾಧ್ಯವಿಲ್ಲವೆಂತಾದರೆ ಇಂಡಿಯಾ ಸರ್ಕಾರವು ಸಹಾಯ ಮಾಡಿಯೇ ಮಾಡುತ್ತದೆ,

ನಿಮ್ಮನ್ನು ಇನ್ನು ಹೆಚ್ಚು ಹೊತ್ತು ತಡೆಯುವುದಿಲ್ಲ, ನಿಮಗೆ 'ಈಗ ನನ್ನ ಆಫೈರ್' ವಂದನೆಯನ್ನು ಹೇಳುವಾಗ, ಇನ್ನು ಮುಂದೆ ನನ್ನ ಮನಸ್ಸು ಪೂರ್ವಕ್ಕೆ ತಿರುಗಿದಾಗ ಅವಶ್ಯವಾಗಿ ಕೊಡಗಿಗೆ ತಿರುಗಿದಾಗ, ಮದ್ರಾಸ್ ಜಿಲ್ಲೆಯ ಸಬ್ ಡಿವಿಜನ್ ಆಗಿರುವ ಕೊಡಗಿನ ಅಥವಾ ದೇಶೀಯ ಸಂಸ್ಥಾನದ ಒಂದು ಚಿಕ್ಕ ಜಿಲ್ಲೆಯೂದ ಕೊಡಗಿನ ಕಡೆಗೆ ಆಗಿರಲಿ, ಚಿಕ್ಕದಾದರೂ ಸುಭಿಕ್ಷವಾದ, ಸ್ವತಂತ್ರವಾಗಿದ್ದು ಗಂಭೀರ ಮತ್ತು ಸುಖಮಯವಾಗಿರುವ ಮುಂದೆ ಆಗಲಿಕ್ಕಿರುವ ಮಹಾ ಹಿಂದೂಸ್ಥಾನದ ಅನ್ಯಾಂತ್ಯಗಳಲ್ಲಿ ಯಾವುದಕ್ಕೂ ಹಿಂದೆ ಬೀಳದ ನಮ್ಮಲ್ಲಿ ಬಹುಕಾಲದಿಂದ ಬೇರೆ ಇಡುವವರ ಮಾತು ಸುಳ್ಳಾಗಿ ಕೊಡಗಿನ ಹಿತ ಚಿಂತಕರು ಸಹ ಯೋಚಿಸದ ಸ್ಥಿತಿ ಇರುವ ಕೊಡಗಿನ ಕಡೆಗೆ ನನ್ನ ವಂದನೆ ತಿರುಗಲಿ.

ವರ್ತಮಾನ ಸಂಗ್ರಹ.

ಒಳ ದೇಶ.

ಮಡಿಕೇರಿಯಲ್ಲಿ ತಾ 21 ಮತ್ತು 24ರಲ್ಲು ಕುದುರೆಗಳ ಜೂಜು ನಡೆಯುವುದು.

ರಾಜಕೀಯ ಚಳವಳಿಯ ಸಂಬಂಧ ಮೆ. ಜೆಪ್ಪುಡಿರ ಪೂಣಚ್ಚನವರಿಗೆ 9 ತಿಂಗಳ ಸಜೆ ವಿಧಿಸಲಾಗಿದೆ,

ಮಡಿಕೇರಿಯಲ್ಲಿ ಕಳೆದ ಆದಿತ್ಯವಾರ 1 ಇಂಚು ಮಳೆಯೂ ಗುರುವಾರ ಬರೇ 20 ಸೆಂಟು ಮಳೆಯು ಬಿತ್ತು,

ಮಡಿಕೇರಿಯಲ್ಲಿ ~~ಫ್ಲೇಗಿನಿಂದ ಒಬ್ಬನು ಮೃತಪಟ್ಟಿರುವನು, ಮತ್ತು ನಾಲ್ಕು ಜನಗಳಿಗೆ ಅಂಟಿದೆ, ಸೋಮವಾರಪೇಟೆಯಲ್ಲಿಯೂ ಹೊಸದಾಗಿ ಒಂದು ಪ್ಲೇಗಿನ ಕೇಸು ಇದೆಯೂಗಿ ತಿಳಿಯುತ್ತೇವೆ.~~

ಕೊಡಗು ಜಮಾನ್ದಾರರ ಸಂಘದ ಕಮಿಟಿ ಎಲೆಕ್ಟಿಂಗೊಂದು, ಸಂಘದ ಜನರಲ್ ಎಲೆಕ್ಟಿಂಗನ್ನು ನಡಿಸುವ ಉದ್ದಿಶ್ಯ ತಾ. 26ರೆಲ್ಲು ಮಡಿಕೇರಿಯಲ್ಲಿರುವ ಸಂಘದ ಹಾಲ್‌ನಲ್ಲು ನಡೆಯುವುದು,

ಮಡಿಕೇರಿಯಲ್ಲು ಕೊಡಗು ಕೌನ್ಸಿಲು ಎಲೆಕ್ಟಿಂಗು ತಾ. 10, 11 ಮತ್ತು 13ರಲ್ಲಿ ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ,

ಚೀಫ್ ಕಮಿಷನರವರಾದ ಲೆಫ್ಟನೆಂಟ್ ಕರ್ನಲ್ ಸರ್ ರಿಚರ್ಡ್ ಬರ್ಕರವರು ಮೇ. 3ಂಗಳಲ್ಲಿ ಪೆನ್ಶನ್ ಹೊಂದುವ ಬಗ್ಯೆ ರಜೆಯಲ್ಲಿ ಹೋಗುತ್ತಾರೆ. ಇವರ ಬದಲಿಗೆ ಲೆಫ್ಟನೆಂಟ್ ಕರ್ನಲ್ ಸಿ. ಡಿ. ಸಿ. ಪಾಲ್ಡೆನರು ಚೀಫ್ ಕಮಿಷನರು ಮತ್ತು ಮೈಸೂರಿನ ರೆಸಿಡೆಂಟರಾಗಿಯೂ ನೇಮಕವಾಗಿದ್ದಾರೆ.

ಅಮ್ಮತ್ತಿ ಯುವಕ ಮಂಡಳಿಯವರು ಫುಟ್ ಬಾಲ್ ಪಂದ್ಯಾಟಕ್ಕೆ ಒಂದು ಬೆಳ್ಳಿಯ ಬಟ್ಟಲನ್ನು ಇಟ್ಟಿರುವರು, ಇದಕ್ಕೆ ಸಂಬಂಧಪಟ್ಟ ಪಂದ್ಯಾಟವು ಬರುವ ತಿಂಗಳಲ್ಲಿ ನಡೆಯುವುದು, ಇದರಲ್ಲಿ ಭಾಗ ವಹಿಸತಕ್ಕ ಟೀಮಿನವರು ಮೇಲ್ಕಂಡ ಸಂಘಕ್ಕೆ ಏಪ್ರಿಲ್ ತಾ. 5ರೊಳಗೆ ತಿಳಿಸತಕ್ಕದ್ದೆಂದು ಸಂಬಂಧಪಟ್ಟವರಿಂದ ತಿಳಿಯುತ್ತೇವೆ.

ತಾ, 4—3—33ರಲ್ಲು ಐಯ್ಯಂಗೇರಿ ಗ್ರಾಮದ ತೊತ್ತಿಯಂಡ ಚಿಣ್ಣಪ್ಪನವರು ತರಕಾರಿ ತೋಟದಲ್ಲಿ ನೀರು ಹೊಯ್ಯಲು ಹೋಗಿದ್ದಾಗ್ಯೆ ಒಂದು ದೊಡ್ಡ ಕರ್ನಾಡ ಹಾವು ಇವರನ್ನು ಬೆರಸಿ ಜಡೆತಿಗೆದಲ್ಲು ಒಂದು ವೊರದ ಆಗಲ ಜಡೆ ಇತ್ತೆಂತಲೂ, ನಂತರ ಇವರು ಮನೆಗೆ ಓಡಿ ಹೋಗಿ 6—7 ಜನರು ಕೋವಿ ತೆಗೆದುಕೊಂಡು ಬಂದು ತೊತ್ತಿಯಂಡ ಚಿಣ್ಣಪ್ಪನವರೇ ಗುಂಡು ಹೊಡೆದು ಕೊಂದಿರುತ್ತಾರೆಂದು ತಿಳಿಯುತ್ತೇವೆ,

ಹಿಂದೂ ದೇಶ.

ಕಲ್ಕತ್ತೆಯ ಕೊಲೂತಲಾ ಪೋಸ್ಟಾಫೀಸಿನಿಂದ 700 ರೂಪಾಯಿಗಳ ಅಂಚೆ ಚೀಟಿಗಳು ಕಾಣದಾಗಿವೆ,

ಹಿಂದೂದೇಶದಲ್ಲಿ ಮತೊಂದು ವಿಲಿಟರಿ ಶಾಲೆಯು ಸದ್ಯದಲ್ಲೇ ತೆರೆಯಲ್ಪಡುವದೆಂದು ವಾರ್ತೆಯಿದೆ,

ಪಾಂಡಿಚೇರಿಯಲ್ಲಿ 20 ಅಂಗುಲದಷ್ಟು ಮಳೆ ಹೊಡೆದು ಸುಮಾರು 200 ಮನೆಗಳು ನಾಶವಾದುವೆಂದೂ ಇದರಿಂದ ಸಾವಿರಾರು ಜನಗಳು ಮನೆ ಮಕ್ಕಳಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆಂದು ವರ್ತಮಾನ,

ತನ್ನ ಸಮ್ಮತಿಯಿಲ್ಲದೆ 65 ವಯಸ್ಸಿನ ಮುದುಕನಿಗೆ ತಂದೆ ತಾಯಿಗಳು ತನ್ನನ್ನು ವಿವಾಹಮಾಡಿ ಕೊಟ್ಟುದಕ್ಕಾಗಿ ಬರೇಲಿಯ ಹೆಣ್ಣ ತರುಣಿಯು ಸೀಮೆ ಎಣ್ಣೆ ಸುರಿದುಕೊಂಡು, ಬೆಂಕಿಹತ್ತಿಸಿ, ಆತ್ಮತ್ಯಾಗ ಮಾಡಿದಳು,

ಬೊಂಬಾಯಿ ಪಟ್ಟಣದ ಒಶ್ಲಾರ್ಡ್ ಪೋಸ್ಟಾಫೀಸಿನಿಂದ 11 ಟನ್ನಾಲು ಜೀಲಗಳನ್ನೂ ಮತ್ತು 3 ಜನ ಕೂಲಿಯವರನ್ನೂ ತುಂಬಿ ತೆಗೆದುಕೊಂಡು ಹೋಗುತ್ತಿದ್ದ ಒಂದು ಲಾರಿಯು ಡ್ರೈವರನ ಅಜಾಗರೂಕತೆಯಿಂದ ಸಮುದ್ರ ಮಧ್ಯದಲ್ಲಿ ಬಿದ್ದು ಒಬ್ಬ ಕೂಲಿಯವನು ಮೃತಪಟ್ಟನು ಮತ್ತು 3 ಟನ್ನಾಲು ಚೀಲಗಳು ಸಹ ಕಾಣದಾದವು.

ಹಾವೂರದಲ್ಲಿ ವಾಸ ಮಾಡುತ್ತಿದ್ದ ಗುಂಸೇನ್ ಎಂಬವನು ಕಳೆದ ತಾ, 11ರಲ್ಲಿ ಹತ್ತಿರದಲ್ಲಿ ಯಾವುದೋ ಒಂದು ಹಳ್ಳಿಗೆ ಹೋಗಿದ್ದನು, ಹಿಂತಿರುಗಿ ಮೂರನೆ ದಿವಸ ಮಧ್ಯಾಹ್ನ ಒಂದು ನೋಡುವಲ್ಲಿ ಮನೆಯಲ್ಲಿದ್ದ ಹೆಂಗಸರು ಮತ್ತು ಮಕ್ಕಳು ಒಟ್ಟು 7 ಜನರು ಸತ್ತು ಬಿದ್ದಿದ್ದರು ಈ ವಿಷಯವಾಗಿ ಪೊಲೀಸಿನವರು ಪತ್ತೆ ತರದೂದನ್ನು ನಡೆಯಿಸುತ್ತಿದ್ದಾರೆ,

"ಸಂಡೇ ಟೈಮ್ಸ್" ಎಂಬ ಪತ್ರಿಕೆಯು ಪ್ರಕಟಿಸಿರುವುದೇನೆಂದರೆ—'ಗಾಂಧಿಜಿಯವರು ತ್ರೀಫ್ರಾದಲ್ಲಿಯೇ ಖುಲಾಸೆ ಮಾಡಲ್ಪಡುವರೆಂದು ಸಂಗತಿಗಳನ್ನು ಬಲ್ಲವರು ತಿಳಿಸುತ್ತಾರೆ. ಕಾನೂನು ಭಂಗವು ಮರುಕಳಿಸುವ ಭೀತಿಯಿಲ್ಲವೆಂದೂ, ಆದುದರಿಂದ ಮಹಾತ್ಮರನ್ನು ಇನ್ನು ಮುಂದೆ ಬಂಧನದಲ್ಲಿಡುವ ಅವಶ್ಯಕತೆಯಿಲ್ಲವೆಂದೂ ಭಾವಿಸಲಾಗಿದೆ. ಮೂರ್ಚೆ ಆಫೈರಿನೊಳಗಾಗಿ ಗಾಂಧಿಜೀರವರ ಖುಲಾಸೆಯು ಆಗಬಹುದೆಂದು ನಿರೀಕ್ಷಿಸಲಾಗಿದೆ.

ಲಂಡನ್ನಿನಿಂದ ಖಾಸಗಿಯಾಗಿ ಬಂದಿರುವ ಸಮಾಚಾರದಿಂದ ತಿಳಿದು ಬರುವುದೇನೆಂದರೆ—ಪಾರ್ಲಿಮೆಂಟಿನ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಪಂಡಿತ ಮೊಳವೀಯರೂ, ಮಹಾತ್ಮ ಗಾಂಧಿಯವರೂ ಆಹ್ವಾನಿತರಾಗುವ ಸಂಭವವು ಸ್ಪಷ್ಟವಾಗಿದೆ. ಖುಲಾಸೆಯೊಗುವರು ಎಂದು 'ಸಂಡೇ ಟೈಮ್ಸ್' ಪತ್ರಿಕೆಯು ಪ್ರಕಟಿಸಿರುವ ಸುದ್ದಿಗೆ ಮೇಲಿನ ಬಾತ್ಮಿಯು ಬೆಬಲವನ್ನೀಯುತ್ತದೆ. ಇಲ್ಲಿ ಇಂಡಿಯಾ ಸರಕಾರದ ಪ್ರಪರಾಷ್ಟ್ರದಲ್ಲಿ ಮೇಲಿನ ಸುದ್ದಿಗೆ ಅಧಿಕಾರ ಮುದ್ರೆಯ ಪೋಷಣೆಯು ಇನ್ನೂ ದೊರೆಯದೆ ಇದ್ದಾಗ್ಯೂ, ಅದು ನಿಜವೆಂದು ಭಾವಿಸಲಾಗಿದೆ. ಗಾಂಧಿಜೀಯವರ ಖುಲಾಸೆಯು ಸಿದ್ಧವೆಂದು ಅಸೆಂಬ್ಲಿಯ ಸದಸ್ಯರು ಧೈರ್ಯವಾಗಿ ಹೇಳುತ್ತಿದ್ದಾರೆ. ಈ ಧೈರ್ಯದ ಮೇಲೆಯೇ ಸ್ಟಾಂಡಿಂಗ್ ಫೈನಾನ್ಸ್ ಕಮಿಟಿಯ ಬಹು ಸಂಖ್ಯಾತ ಸದಸ್ಯರು ಜಾಯಿಂಟ್ ಪಾರ್ಲಿಮೆಂಟರೀ ಕಮಿಟಿಯ ಭಾರತೀಯ ಪ್ರತಿನಿಧ್ಯದ ಖರ್ಚಿಗಾಗಿ ಎರಡು ಲಕ್ಷ ಹವಿನಾಲ್ಕು ಸಾವಿರ ರೂಪಾಯಿಗಳ ಖರ್ಚನ್ನು ಮಂಜೂರು ಮಾಡಿದರು ಎಂದು ಹೇಳಲ್ಪಟ್ಟಿದೆ.

ಹಿಂದೂ ದೇಶದಲ್ಲಿ ಬ್ರಿಟಿಷರಿರುವ ವ್ಯಾಪಾರ ಬಾಂಧವ್ಯದ ವಿಚಾರವಾಗಿ ಎ. ಪೇಜ್ ಕ್ರಾಫ್ಟ್‌ರು, "ಫೈನ್ಸ್ಸಿಯಲ್ ಟೈಮ್ಸ್" ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿರುವರು, ಅವರ ಅಭಿಪ್ರಾಯದ ಪ್ರಕಾರ ಭಾರತೀಯ ಪೂರ್ಣ ಸ್ವರಾಜ್ಯ ಸಫಲತೆಯಿಂದ ಬ್ರಿಟಿಷರ ವ್ಯಾಪಾರಕ್ಕೆ ಪ್ರತಿ ಬಂಧಕವುಂಟಾಗುವುದೆಂದೂ ಆಫೈರಿನಲ್ಲಿ ಲಂಕಾಷೈರ್ ಪದಾರ್ಥಗಳ ರವಾನೆಗೆ ಕುಂದುಕವುಂಟಾಗುವುದೆಂದೂ ತಿಳಿಸಿರುವರು, ತನ್ನ ಅಭಿಪ್ರಾಯಗಳನ್ನು ಮುಂದುವರಿಸುತ್ತಾ "ಹಿಂದೂ ದೇಶದ ರಾಜ್ಯಾಂಗ ರಚನಾ ಕ್ರಮಗಳನ್ನು ನಿರ್ಧರಿಸುವಾಗ ಲಂಡನ್ ನಗರದ ವ್ಯಾಪಾರಸ್ಥರ ಕೋರಿಕೆಗಳನ್ನು ಮರೆಯಬಾರದು ಬ್ರಿಟಿಷರವರ ಧನಸಂಪತ್ತಿನಿಂದ ಅಧಿಕವಾಗಿ ಭಾರತೀಯ ವ್ಯಾಪಾರ ಬಾಂಧವ್ಯವನ್ನು ರಕ್ಷಿಸಬೇಕು, ರಸ್ಪರ ಉಚಿತ ವ್ಯಾಪಾರದ ಪದ್ಧತಿಗನುಸಾರವಾಗಿ ವರ್ತಿಸುವುದಾದ ಆರ್ಥಿಕ ಸಂಬಂಧವನ್ನು ಸ್ಥಾಪಿಸಬೇಕು, ಎಂಬುದಾಗಿ ಬರೆದಿರುವರು,

ವಿದೇಶ.

ನುಸಿಗಳನ್ನು ಒಂದು ನಳಿಗೆಯ ಮೂಲಕ ಹೀರಿ ಕೊಲ್ಲುವ ಒಂದು ಬಗೆಯ ಸಾಧನದ ಯಂತ್ರವನ್ನು ಫ್ರೆಂಚ್ ಮಹಾಶಯನೊಬ್ಬನು ರಚಿಸಿರುವನು,

ಪಿಷಿಂಗ್ ಸಮಾಚಾರ ತಿಳಿಸುವದೇನೆಂದರೆ—ಕುಪ್ಪೈಕೋನಲ್ಲಿ ಭೂಕಂಪ ಘೋರವಾದ ಹೊಡೆದಾಟವು ಆರಂಭಿಸಿರುವುದರಿಂದ ಗಾಬರಿಯೂ, ಉದ್ರೇಕವೂ ರಾಷ್ಟ್ರದಲ್ಲೆಲ್ಲಾ ಹರಡಿದೆ. ಚಾಂಗ್ ಹೂಷಿಂಗ್ ಎಂಬ ಚೈನಾದ ಸೇನಾಪತಿಯು 30 ಸಾವಿರ ಯೋಧರನ್ನು ಜೊತೆಯಲ್ಲಿ ಕರೆದುಕೊಂಡು ಚೈನಾದ ಹೆದ್ದಾರಿಯಲ್ಲಿ ಜಪಾನರನ್ನು ಪ್ರತಿಭಟಿಸುತ್ತಿದ್ದಾನೆ, ಜಪಾನಿಗಳು ವಿಮಾನಗಳಿಂದ ಗುಂಡುಗಳನ್ನೂ, ಬಾಂಬುಗಳನ್ನೂ ಸುರಿಮಳೆ ಕರೆಯುತ್ತಿದ್ದಾರೆ, ಆದಾಗ್ಯೂ ಚೈನಿಗಳು ಕಣ್ಣಿಯನ್ನು ಭದ್ರವಾಗಿ ಕಾಯುತ್ತಿದ್ದಾರೆ.

ಮೆಕ್ಸಿಕೋ ಪಟ್ಟಣದಲ್ಲಿ ಸಿನಿಮಾ ಥಿಯೇಟರಿನಲ್ಲಿ ಹರಿದಾಡುತ್ತಿದ್ದ ವಿದ್ಯುದ್ ಪ್ರವಾಹದ ಶಕ್ತಿಯು ಕತ್ತರಿಸಿ ಹೋಗಿ ಮುಂಭಾಗದ ಕೈಸಾಲೆಯಲ್ಲಿ ಕುಳಿತುಕೊಂಡಿದ್ದ 70 ಜನಗಳಿಗೆ ಬಹಳ ನೋವೂ ಮತ್ತು 41 ಜನರೂ ಮೃತಪಟ್ಟರು,

ಪ್ರಪಂಚದಲ್ಲಿ ಅತೀ ಹೆಚ್ಚು ಬೆಲೆಯ ಕಣ್ಣುಗಳು ಯಾವುವೆಂದು ತಿಳಿಯಿತು,—50,000 ಪವನು ಬೆಲೆ! ಸ್ವೀಡನಿನ ವೊಗಿಟಾ ಆಲ್ಕ್ವಿನ್ ಎಂಬ ನಟಿಯ ಕಣ್ಣುಗಳಿವು! ಬಲು ಮೋಹಕರವಾಗಿನೆಯಂತೆ! 50,000 ಪವನಿಗೆ ಏಮೆಮೂಡಲ್ಪಟ್ಟಿವೆ. 50 ಲಕ್ಷ ಜನರಿಗೀಗ ಅವಳ ಮೇಲೆ ಕಣ್ಣು!

ಪೂರ್ವ ಆಫ್ರಿಕದ ಕೊಡವರ ಸಂಘ.

3ನೇ ವಾರ್ಷಿಕ ವರದಿ, 1932,

ಈ ಮೇಲಿನ ಸಂಘದ 3ನೇ ವಾರ್ಷಿಕ ವರದಿಯನ್ನು ವಾಚಕ ಮಹಾಶಯರ ಮುಂದಿಟ್ಟ

ಸಂಘದ ಕೂಟ ಪುತ್ತು ಚಳವಳ್ಳಿ—ಕಳೆದ ಹನ್ನೆರಡು ತಿಂಗಳುಗಳಲ್ಲಿ 1932ನೇ ಡಿಸೆಂಬರ್ ತಾರೀಕು 27ಶಲ್ಲಿ ನಡೆದ ವಾರ್ಷಿಕ ಕೂಟವನ್ನು ಬಿಟ್ಟರೆ, ಹತ್ತು ಸಾಧಾರಣ ತರದ ವಿಚಾರಗಳು ಮೂತ್ಯ ಜರಗಿರುವುವು. ಈ ಸಂಘದ ಎಲ್ಲೆ ಜಿಲ್ಲೆಗಳಲ್ಲಿರುವ ಹೆಚ್ಚು ಕಮ್ಮಿ ಎಲ್ಲಾ ಮೆಂಬರರೂ ಸಮಯ ವರಿತು ಹಂಗಾಮಿ ರಜೆಯಲ್ಲಿ ಮತ್ತು ದೀರ್ಘ ರಜೆಯಲ್ಲಿ ಮೂತ್ಯ ದೇಶಕ್ಕೆ ಹೋಗುವಾಗಲೂ ಹಿಂತಿರುಗಿ ಬರುವಾಗಲೂ ಅಲ್ಲದೆ ಗೌರವ ಮೆಂಬರರಾದ ಕೆ. ಎ. ಚಂಗಪ್ಪನವರೂ ಸಹ ಇದರ ಕಾರ್ಯಾಲಯಕ್ಕೆ ಬಂದು ಅನ್ಯೋನ್ಯ ಭಾವದಿಂದ ಕಲೆತು ಮುಂದಿನ ಅಭಿವೃದ್ಧಿಯ ಸಲುವಾಗಿ ನಾನಾ ತರದ ಅಭಿಪ್ರಾಯಗಳನ್ನು ಬಹಿರಂಗಪಡಿಸಿರುವುದು ಹೆಚ್ಚಿನ ಸಂತೋಷವೇ ಸರಿ. ಈ ಸಂಘದ ಮುಂದುವರಿಕೆಯು ಗತವರ್ಷಕ್ಕಿಂತ ಉನ್ನತ ಸ್ಥಿತಿಯಲ್ಲಿ ನಡೆಯುತ್ತಿದ್ದರೂ ಮತ್ತು ಮುಖ್ಯೋದ್ದೇಶವು ಸಾಧ್ಯವಾದಷ್ಟು ಮೆಂಬರುಗಳನ್ನು ಸೇರಿಸುವುದಾಗಿದ್ದರೂ, ಮೆಂಬರುಗಳ ಮನಸಿನಲ್ಲಿ ಅಂಕುರಿಸಿದ ಅತೃಪ್ತಿಗೋಸುಗ ಈ ಸಂಘದಿಂದ ಇಬ್ಬರು ಮೆಂಬರರನ್ನು ನಿವೃತ್ತಿ ಮಾಡಬೇಕಾಗಿದೆಯೆಂಬುದಕ್ಕೆ ವಿಷಾದಿಸುತ್ತೇನೆ.

ಪತ್ರವ್ಯವಹಾರಗಳು:—ಈ ಮೇಲಿನ ವರ್ಷದಲ್ಲಿ ಈ ಸಂಘಕ್ಕೆ ಹರದಾಸ ಅಪ್ಪಚ್ಚ ಕವಿಗಳವರಿಂದಲೂ, ದಿವಂಗತ ಶ್ರೀಮಾನ್ ಪಾಂಡಂಡ ಮುತ್ತಣ್ಣನವರಿಂದಲೂ, ಮೆ. ಪುಚ್ಚಿಮಂಡ ಬೆಳ್ಯಪ್ಪನವರಿಂದ ಅವರ ಪುತ್ರನ ಮರಣದ ಸಲುವಾಗಿಯೂ ದಿವಂಗತ ಮೆ ಪಿ. ಬಿ. ಅಪ್ಪಯ್ಯನವರ ಪತ್ನಿಯವರಿಂದಲೂ ಅಲ್ಲದೆ ಬೊಂಬಾಯಿ ಕೊಡವರ ಸಂಘದ ಗೌರವ ಕಾರ್ಯದರ್ಶಿಯವರಿಂದಲೂ ಸಹ ಒಂದೊಂದು ಪತ್ರವು ಬಂದಿರುವುದು. ಜೊಂಬಾಯಿ ಕೊಡವರ ಸಂಘದ ಕಾರ್ಯದರ್ಶಿಯವರಾದ ಪಿ. ಎ. ಮೂಚಯ್ಯನವರು ನಮ್ಮ ಸಂಘದ ಅವಲೋಕನಾರ್ಥವಾಗಿ "ಮೈಸೂರು ಕೊಡವರ' ಸಂಘದ ಬೈಲಾಗಳನ್ನೊಳಗೊಂಡ ಒಂದು ಹಸ್ತ ಪತ್ರಿಕೆಯನ್ನು ಧಯವಾಲಿಸಿದಕ್ಕೋಸುಗ ಈ ಸಂಘದ ಪರವಾಗಿ ಇವರಿಗೆ ನನ್ನ ಅಭಿವಂದನೆಗಳು.

ಆರ್ಥಿಕ ವ್ಯವಸ್ಥೆ:—ವರ್ಷದ ಆದಿಯಲ್ಲಿ ಸಂಘದ ಭಂಡವಾಳವು ಎಲ್ಲಾ ಖರ್ಚು ಕಳೆದು ಶಿಲಿಂಗು 936 ಸೆಂಟು 72 ಇದ್ದರೂ, ಅಂತ್ಯದಲ್ಲಿ ಚಂದಾ ಹಣ ವಗೈರೆ ಸೇರಿ ಶಿಲಿಂಗು 1316 ಸೆಂಟು 97 ಶೇಕರಿಸಲಾಗಿದೆ. ಅಲ್ಲದೆ ಎಲ್ಲಾ ಮೆಂಬರರೂ ಅವರವರ ಒಂದು ವರ್ಷದ ಚಂದಾ ಹಣವನ್ನು ಈ ಕಳೆದ 12 ತಿಂಗಳುಗಳೊಳಗೆ ಪಾವತಿ ಮಾಡಿರುವುದರಿಂದ ಸಂಘದ ಮುಂದು ವರಿಕೆಗೆ ಒಂದು ಶುಭ ಸೂಚನೆಯೇ ಸರಿ.

ಖರ್ಚು ವೆಚ್ಚ:—ಈ ಸಂಘದ ಧನದಿಂದ ಕಳೆದ 12 ತಿಂಗಳುಗಳಲ್ಲಿ ಸ್ಟಾಂಪುಗಳ ಮತ್ತು ಇತರ ಅವಶ್ಯವಿರುವ ಸಾಮಾನುಗಳ ಬಗ್ಗೆ ಶಿಲಿಂಗು 21 ಸೆಂಟು 95 ಖರ್ಚು ಮಾಡಿರುವುದಲ್ಲದೆ ಈ ಸಂಘದ ಒಬ್ಬ ಮುಖ್ಯ ಮೆಂಬರರಾಗಿದ್ದ ದಿವಂಗತ ಮೆ. ಪಿ. ಬಿ. ಅಪ್ಪಯ್ಯನವರಿಂದ ಸಲ್ಲ ಬಂದ ಶಿಲಿಂಗು 23 ಇಷ್ಟು ಹರದಾಸ ಅಪ್ಪನೆರವಂಡ ಅಪ್ಪಚ್ಚನವರೂ ಮತ್ತು ಕೊಡಗು ಮತ್ತು ಕೊಡವರು', ಕೊಡವರ ಕೈಪಿಡಿ", 'ಕುಲದ್ದಿ ಸ್ವರ್ಗದಾಗಮನ', 'ನಾಗರೀಕತೆಯ ಪರಿಣಾಮ', ಅಲ್ಲಾ ಜೊತೆಯಲ್ಲಿಯೇ ಅವರೊಂದೊಂದು ಭಾವ ಚಿತ್ರವನ್ನೂ ಸಹ ಸ್ಮರ್ಣಾರ್ಥ, ದೇಶಭಾಂಧವ, ದಿವಂಗತ ಶ್ರೀಮಾನ್ ಪಾಂಡಂಡ ಮುತ್ತಣ್ಣನವರೂ ಈ ಸಂಘದ ಅವಲೋಕನಾರ್ಥವಾಗಿ ಅಯಸಾಲಿಸಿರುವುದರಿಂದ ನಾವೆಲ್ಲರೂ ಧನ್ಯರೇ ಸರಿ ಮತ್ತು ಈ ಸಂಘದ ಪರವಾಗಿ ಈ ಮೇಲಿನ ದಿವ್ಯ ಪುರುಷರಿಗೆ ನನ್ನ ಅಭಿವಂದನೆಗಳು,

ಸಂಘದಿಂದ ಮೆಂಬರರ ಬಹಿಷ್ಕೃತಿ:—ಈ ಸಂಘದಿಂದ ಕಳೆದ ಎರಡು ವರ್ಷಗಳಿಂದ ಕಳುಹಿಸಲ್ಪಟ್ಟ ಅನೇಕ ಪತ್ರವ್ಯವಹಾರಗಳಿಗೆ ಯಾವ ತರದ ಪ್ರತಿ ಜವಾಬು ಸಿಕ್ಕದ್ದರಿಂದಲೂ ಮತ್ತು ಎರಡು ವರ್ಷದ ಚಂದಾ ಹಣವನ್ನು ಪಾವತಿ ಮಾಡದಿದ್ದುದರಿಂದಲೂ, ಮೆ. ಯಂ. ಪಿ. ಐಯ್ಯಪ್ಪನವರ ಮತ್ತು ಮಿಸೆಸ್ ಐಯ್ಯಪ್ಪನವರ ಮೆಂಬರುತನವನ್ನು ಈ ಸಂಘದಿಂದ ರದ್ದು ಮಾಡುವ ಅವಶ್ಯಕತೆ ಬಂದುದಕ್ಕೆ ಒಂದು ವಿಧದಲ್ಲಿ ವಿಷಾದವಾದರೂ ರೂ. 15ನ್ನು ಅವರ ಧರ್ಮ ಪತ್ನಿಯವರಿಗೂ ಮತ್ತು ಚಂದಾ ಹಣದ ಬಗ್ಗೆ 1930ನೇ ಇಸವಿಯಲ್ಲಿ ಮೆ. ಯಂ. ಪಿ. ಐಯ್ಯಪ್ಪ ಮತ್ತು ಮಿಸೆಸ್, ಐಯ್ಯಪ್ಪನವರಿಂದ ಸಲ್ಲಿ ಬಂದ ಶಿಲಿಂಗು 25ನ್ನೂ ಸಹ ಹಿಂತಿರುಗಿ ಕೊಡಲಾಯಿತು.

ಸ್ವದೇಶಿ ದಿವ್ಯ ಪುರುಷರ ಉದಾರತ್ವ:—ಪರ ದ್ರವ್ಯಕ್ಕೆ ಮನಸ್ಸು ಕೊಡದೆ ತನ್ನ ಕುಲ ವೃತ್ತಿಗೆ ಅಪಮಾನವನ್ನು ತಂದುಕೊಳ್ಳದೆ, ವಿನಯ ದಯದಾಕ್ಷಿಣ್ಯ ಮುಂತಾದ ಗುಣಗಳಿಂದಲೂ ವಿದ್ಯೆಯಿಂದಲೂ ಹೆಚ್ಚುತ್ತಾ ಕೆಟ್ಟ ಮೂಢನಂಬಿಕೆಗಳನ್ನಾಡದೆ ಧರ್ಮ ಮಾರ್ಗದಲ್ಲಿ ನಡೆಯುವ ಸತ್ಪುರುಷನ ಹಾಗೆ ಇತರ ಕವಿಗಳ ಅಭಿಪ್ರಾಯಗಳನ್ನಪೇಕ್ಷಿಸದೆ, ವಿಶ್ರಾಂತಿ ಸ್ಥಾನಕ್ಕೆ ಚ್ಯುತಿಯನ್ನು ಮಾಡದೆ ಅತಿ ಸಹಸದಿಂದ ಕೈಕೊಂಡಂಥ ಕಾರ್ಯಗಳನ್ನು ಪೂರ್ತಿಗೊಳಿಸಿ ರಚಿಸಿದಂಥ ಗ್ರಂಥಗಳ ಪೈಕಿ 'ಯಯಾತಿ' ಮತ್ತು 'ಕಾವೇರಿ ಮಹಾತ್ಮೆ' ನಾಟಕಗಳ ಒಂದೊಂದು ಸಂಚಿಕೆಯನ್ನು ಜ್ಞಾನವೃದ್ಧ ನಮ್ಮ ಕೊಡಗಿನ ಕವಿಶಾದಪಡಬೇಕಾದರೂ, ಈಗಾಗಲೇ ಈ ಸಂಘದ ಮೆಂಬರುಗಳ ಪೈಕಿ ಕೆಲವು ಯುವಕರು ತಮ್ಮ ವಿವಾಹ ಮಹೋತ್ಸವಗಳನ್ನು ಪೂರೈಸಿ ಪತ್ನಿಯರು ಸಮೇತ ಹಿಂತಿರುಗಿ ಇಲ್ಲಿಗೆ ಬರುವುದರಿಂದ, ಈ ಸಂಘದಲ್ಲಿ ಸ್ತ್ರೀಯರ ಮೆಂಬರುತನವು ಹೆಚ್ಚಾಗಬಹುದಾದುದರಿಂದ ಇನ್ನೊಂದು ವಿಧದಲ್ಲಿ ಸಂತೋಷವೇ ಸರಿ.

ವ್ಯಸನ ಸೂಚಕ ಶರಾವು:—1932ನೇ ಜುಲೈ ತಾರೀಖಿನ 'ಕೊಡಗು' ಪತ್ರಿಕೆಯಲ್ಲಿ ಮೆ. ಪಾಂಡಂಡ ಮುತ್ತಣ್ಣನವರ ಮರಣವಾರ್ತೆಯನ್ನು ನೋಡಿದ ಒಡನೆ ಈ ಸಂಘವು ಒಂದು ವ್ಯಸನ ಸೂಚಕ ವಿಷಯವನ್ನು ಜರುಗಿಸಿ ಅದರ ಠರಾವನ್ನು ದಿವಂಗತರ ಸಮ್ಮಂಧಿಕರಿಗೆ ಕಳುಹಿಸುವ ನಿರ್ಮರ್ಷೆ ಮಾಡಿತ್ತಾದರೂ, ಇಲ್ಲಿರುವ ಈ ಸಂಘದ ಮೆಂಬರರ ಪೈಕಿ ಯಾರಿಗೂ ದಿವಂಗತರ ಸಮ್ಮಂಧಿಕರ ವಿಳಾಸವು ದೊರೆಯದ ಪ್ರಯುಕ್ತ ಬಾಕಿಯಾಯಿತೆಂಬದಕ್ಕೆ ಈ ಸಂಘವು ವಿಷಾದಿಸುತ್ತದೆ, ಈ ಕಾರಣದಿಂದಲೇ ಸಂಘದ ಒಬ್ಬ ಮೆಂಬರನಾದ ಮೆ. ಪಿ. ಬಿ. ತಿಮ್ಮಯ್ಯನವರು ಆಗಷ್ಟ್ ತಾರೀಕು 19ರ 'ಕೊಡಗು" ಪತ್ರಿಕೆಯಲ್ಲಿ ಒಂದು ವ್ಯಸನ ಸೂಚಕ ಪ್ರಕಟಣೆಯನ್ನು ಪ್ರಕಟಿಸಲು 'ಕೊಡಗು ಪತ್ರಿಕೆಯ ಸಂಪಾದಕರಿಗೆ ಕಳುಹಿಸಿದ್ದಾಗಿದೆ,

ಸಂಘದ ಕಾರ್ಯಾಲಯ ಮೆಂಬರರ ಉದಾರತ್ವ:—ಕಳೆದ ಜೂನ್ ತಿಂಗಳ ಸಮಯದಲ್ಲಿ ಇಲ್ಲಿ 'ಡೆಕರಾ ಸಲಾಂ'ನಲ್ಲಿದ್ದ ಈ ಸಂಘದ ಮೆಂಬರರು ಶ್ರೀಯುತರಾದ ಯಸ್, ಯಂ. ಕಾಳಪ್ಪ, ಬಿ, ಡಬ್ಲ್ಯು. ಮುದ್ದಪ್ಪ, ಕೆ, ಯಂ, ನಂಜಪ್ಪ, ಕೆ. ಪಿ, ಪೊನ್ನಪ್ಪ ಮತ್ತು ಪಿ, ಬಿ, ತಿಮ್ಮಯ್ಯನವರು ಸೇರಿ ಇಲ್ಲಿ 'ಶ್ರೀ ಸನಾತನ ಧರ್ಮ' ಸಭೆಯ ಹಿಂದು ದೇವಸ್ಥಾನವನ್ನು ಕಟ್ಟುವ ಬಗ್ಗೆ ಶಿಲಿಂಗು 112 ಸೆಂಟು 50ನ್ನು ಉಚಿತವಾಗಿ ಕೊಟ್ಟಿರುವರು,

ಸಮೂಹ್ಯ—ಗತ ವರ್ಷಗಳಲ್ಲಿ ಲೋಕವ್ಯವಹಾರದ ಆರ್ಥಿಕ ವ್ಯವಸ್ಥೆಯು ಹೀನಸ್ಥಿತಿಗೋಸುಗ ಸರ್ಕಾರಿ ಇಲಾಖೆಯಿಂದಲೂ, ರೈಲ್ವೇ ಇಲಾಖೆಯಿಂದಲೂ ಮತ್ತು ಕಂಪೆನಿಗಳಿಂದಲೂ ಅನೇಕ ನೌಕರರನ್ನು ನಿವೃತ್ತಿಮಾಡಿತ್ತಾದರೂ, ಈ ಸಂಘದ ಮೇಲಿನ ಇಲಾಖೆಗಳಲ್ಲಿ ನಾನಾತರಹದ ಉದ್ಯೋಗಗಳನ್ನು ಕೈಕೊಂಡಿರುವ ಮೆಂಬರುಗಳ ಪೈಕಿ ಯಾರಿಗೂ ಇದುವರೆವಿಗೂ ಯಾವ ರೀತಿಯಲ್ಲಿಯೂ ವಿಘ್ನವು ಬಂದೊದಗದಿರುವುದು, "The East African Coorgs' Union" ನಿನ್ನ ಮುಂದಿನ ಅಭಿವೃದ್ಧಿಗೆ ಒಂದು ಶುಭಸೂಚಕವೆಂದರೆ ಏಸ್ಮಯವೆನಿಸದು.

ಪಿ, ಬಿ, ತಿಮ್ಮಯ್ಯ,
ಗೌರವ ಕಾರ್ಯದರ್ಶಿ,

ಪತ್ರವ್ಯವಹಾರ.

[ಪತ್ರಿಕಾದಾರರು ಪಡೆದ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ]

ಮಡಿಕೇರಿ ಅರಮನೆ ರಿಪೇರಿ.

ಈಗ್ಗೆ ಸುಮಾರು ಒಂದೂವರೆ ಶತಮಾನದ ಹಿಂದೆ ಕಟ್ಟಲ್ಪಟ್ಟ ಮಡಿಕೇರಿ ಅರಮನೆಯು ಹಾಳಿ ರಿಪೇರಿಗೆ ಬಂದದ್ದರಿಂದ ಸರಕಾರದವರು ತಡೆದು ಇದ್ದು ನಿರ್ವಾಹವಿಲ್ಲದೆ ಈಚೆಗೆ ನಮ್ಮ ಇಂಡಿಯ ವೈಸರಾಯ ಪ್ರಭುಗಳು ಮಡಿಕೇರಿಗೆ ದಯ ಮಾಡಿಸಿದ ನಂತರ ಸುಮಾರು 3 ಲಕ್ಷ ರೂಪಾಯಿಗಳ ವೆಚ್ಚವನ್ನು ವೆಚ್ಚವಾಗುವಂತ ಕಾಮಗಾರಿಯು ವಾರಂಬವಾಗಿ ಒಂದು ವರ್ಷದಲ್ಲಿ ಸದರಿ ಅರಮನೆಯ ಮುಂಬಾಗದ ಕೆಲಸವು ಪೂರೈಸುತ್ತಾ ಬಂದಿದೆಯಷ್ಟೆ ಸದರಿ ಮುಂಬಾಗದ ಯಿಡಪಾರ್ಶ್ವದ ಪಾಳಿಯ ಮೇಲಚ್ಚಾಗದಲ್ಲು ಒಂದು ದೊಡ್ಡ ಕ್ವಾರ್ಟರ್ ಟವರ್ ನವೀನವಾಗಿ ಇಡುವ ಕಾಮಗಾರಿ ಮೂತ್ಯ ನಡಿಯುತ್ತಿದೆಯೆಂಬಿ ತಿಳಿಯುತ್ತೆ, ಈ ಸಂದರ್ಭದಲ್ಲಿ ಬಡಪಟ್ಟಣಿಗನ ಸೂಚನೆಯು ಯೋಗ್ಯವಾದದ್ದೆಂತ ಕಂಡಲ್ಲೂ ಸರಕಾರದ ಮುಂದಿಡಲ್ಲೂ ಕೇಳಿಕೊಳ್ಳುವುದಾಗಿದೆ.

ಸದರಿ ಗಡಿಯೂರದ ಸ್ಥೆಂಭವು ಹಾಳಿ ಸರಕಾರದವರು ಅಭಿಪ್ರಾಯಪಟ್ಟಿರುವ ಮೇರೆ ಅರಮನೆ ಬತ್ತೆರಿಯೊಳಗಣ ನೋಟಕರಿಗೆ ಮೂತ್ಯ ಕಂಡು ಬಂದು ಹೆಚ್ಚಾಗಿ ಅಲ್ಲಿಗೆ ಪ್ರಯೋಜನವಾಗುತ್ತೆ ಶಿವಾಯಿ ಟೌನಿನ ಜನರಿಗೆ ಗಂಟೆ ನೋಡಿ ಗೊತ್ತುಮಾಡಿಕೊಳ್ಳುವಷ್ಟು ಪ್ರಯೋಜನಕ್ಕೆ ಬರುವದಿಲ್ಲವಾಗಿ ತಿಳಿದು ಬರುತ್ತೆ ಸರಕಾರದವರಿಗೆ ನನ್ನಂಥಾ ಅಲ್ಪ ಮತಿಯು ಹೇಳಿಕೊಡಬೇಕಿಲ್ಲವಾದರೂ ಗಡಿಯೂರದ ಉತ್ತರಾಭಿಮುಖದಲ್ಲಿ ಘಂಟೆ ಚಕ್ಕವು ಇರುವದಿಲ್ಲವಾಗಿ ತಿಳಿದು ಬಂದದ್ದರಿಂದಲೂ ಉತ್ತರ ದಿಕ್ಕಿನಿಂದ ಮುಖ್ಯವಾಗಿ ಇಡುವುದರಿಂದ ಪೇಟೆಯ ಅನೇಕ ಭಾಗಗಳಿಗೆ ಆ ಕಡೆಯಿಂದ ಕಾಣಲು ಸಾಧ್ಯವಾಗುತ್ತದೆಯೊದ್ದರಿಂದಲೂ ಇದಕ್ಕೆ ಸಮ್ಮಂದಪಟ್ಟ ಅಧಿಕಾರಿಗಳು ಈ ವಿಷಯವನ್ನು ಚಿತ್ತಕ್ಕೆ ತಗೆದುಕೊಂಡು ಉತ್ತರ ದಿಕ್ಕಿಗೂ ಗಡಿಯೂರದ ಘಂಟೆ ಚಕ್ಕವೂ ಇಟ್ಟು ತೋರುವಂತೆ ಮಾಡುವುದಾದರೆ ಪೇಟೆಯ ಜನರಿಗೂ ಇತರರಿಗೂ ಉಪಕಾರವಾಗುತ್ತದೆ. ಇದು ಅಧಿಕಾರಿಗಳ ಗಮನಕ್ಕೆ ಬರಲೆಂದು ಹಾರೈಸುವದಾಗಿದೆ.

ಆದರೆ ಅರಮನೆಯ ಮುಂಬಾಗದ ಎಡಪಾರ್ಶ್ವದಲ್ಲಿ ಮೂತ್ಯ ಈ ಎತ್ತರವಾದ ಗೋಪುರದಂತೆ ಕೋಭಿಸುವ ಕ್ಲಾಕ್‌ಟವರಿಗೆ ಪ್ರತಿಯಾಗಿ ಒಲಭಾಗದಲ್ಲು ಸಹ ಒಂದು ಆಕೃತಿಯು ತೋರಿದೆ ಹೋದರೆ ಆ ಕಡೆ ಬೀಳದಂತೆ ಆಗುತ್ತೆ. ಕೊಡಗಿಗೆ ಮುಖ್ಯ ಪಟ್ಟಣವಾದ ಮಡಿಕೇರಿಯು ಹೆಡ್ ಕ್ವಾರ್ಟರಾಗಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ವೊದಲಾದ ದೊಡ್ಡ ದೊಡ್ಡ ಅಧಿಕಾರಿಗಳಿರುವ ಪಟ್ಟಣವಾಗಿ ಬೇಸಿಗೆಯಲ್ಲಿ ಇಂಪಾದ ಗಾಳಿ ಹವೆಯು ಸೊಂಪಾದ ಮರಗಿಡಗಳಿಂದ ಕೂಡಿದ್ದಾಗಿಯೂ ಅರಮನೆಯ ಸಮೀಪ ಓಂಕಾರೇಶ್ವರ ದೇವಾಲಯ ಇದರ ಅಂದ ಮುಂತಾದ್ದನ್ನು ನೋಡಲಿಕ್ಕಾಗಿ ಅನೇಕ ಪರದೇಶಸ್ಥರು ಇಲ್ಲಿಗೆ ಬರುವವರಾಗಿದ್ದಾರಾದ್ದರಿಂದ ನೋಟಕರಿಗೆ ಅಂದವಾಗಿರುವಂತೆ ರಚನೆಯು ನಡೆಯಬೇಕಾದ್ದು ಅವಶ್ಯವೆಂಬುದನ್ನು ಹೇಳಬೇಕಾಗಿಲ್ಲ. ಕಟ್ಟಡ ಸುರುವಾಗುವಾಗಲೇ ಅಧಿಕಾರಿಗಳ ಅವಗಾಹನೆಗೆ ಬಂದು ಜನರ ಕೃತಜ್ಞತೆಗೆ ಪಾತ್ರರಾಗಿ ಅವರಿಗೆ ಕೀರ್ತಿ ಇರಲೆಂದು ಬಯಸುವ.

ಪಟ್ಟಣಿಗ.

ಪರಿ.

ಅಯ್ಯಾ,

"ತಿಳಿದ ರೈತ" ಸರಕಾರದ ದೃಷ್ಟಿಯಲ್ಲಿ ನಾನೂ ನೀವೂ ರೈತರು ಆದರೆ ನಾನು ಪರಿಯ ವಿಷಯವಾಗಿ ಬರೆದ ಪತ್ರಿಕೆಗೆ ನೀವು ಕೊಟ್ಟ ಜವಾಬನ್ನು ಆ ಪತ್ರಿಕೆ ದೃಷ್ಟಿಯಿಂದ ನೋಡಿದರೆ ನೀವು ಕೃಷಿಕ ರೈತರಲ್ಲ. ನೀವು 11—12—ಸೇರಿನ ಪರಿಯಲ್ಲಿ ಭತ್ತದ ವ್ಯಾಪಾರ ಮಾಡುತ್ತಿದ್ದು ಈಗ 10 ಸೇರಿನ ನಿರಖು ಪರಿಯಲ್ಲಿ ಮನಸೆಬ್ಬೀ ಇಚ್ಛೆ ವ್ಯಾಪಾರ ಮಾಡಲು ಸಿಕ್ಕದ ಮನನೊಂದ ಭತ್ತದ ವ್ಯಾಪಾರಿಯೊಗಿರಬಹುದು ಅದಲ್ಲವಾದ್ದರೆ ನನ್ನ ಪತ್ರಿಕೆಗೆ ನೀವು ಆ ಜವಾಬು ಬರಿಯಬೇಕಾದ ಅನಿವಾರ್ಯವೇ ಇತ್ತಿಲ್ಲ. ಪರಿ ಮತ್ತು ಗಾಡಿಯ ವಿಷಯ ಏನೂ ಗೊತ್ತಿಲ್ಲದ ನನಗೆ ಪರಿ ಎತ್ತ ಗಾಡಿ ಎಂದರೆ ಏನು ಎಂಬದ್ದನ್ನು ತಿಳಿಸಿಕೊಟ್ಟ ನಿಮಗೆ ನಾನು ತುಂಬಾ ಋಣಿಯೊಗಿದ್ದೇನೆ. ಹೀಗೆಯೇ ಅದಿವು ಇಲ್ಲದ ಸಂಗತಿಗಳು ನಿಮಗೆ ಪತ್ರಿಕೆಯಲ್ಲಿ ಓದಲು ಸಿಕ್ಕಿದರೆ ಇನ್ನು ಮುಂದಕ್ಕು ಹೀಗೆಯೇ ಪತ್ರಿಕೆಯ ಮೂಲಕ ತಿದ್ದುತ್ತಾ ಇರುಸಿರಾಗಿ ಕೋರುತ್ತೇನೆ.

11—12 ಸೇರಿನ ಪರಿ ಇತ್ತೆಂದು ನೀವು ನಿಮ್ಮ ಬಾತ್ಮಿಯಲ್ಲಿ ಒಪ್ಪಿಕೊಂಡಿದ್ದೀರಿ ಅಂಥಾ 11—12—ಸೇರಿನ ಪರಿಯನ್ನು ಇಟ್ಟುಕೊಂಡಿದ್ದವರೇ ಈಗ ಹೊಸ ನಿರಖು ಪರಿಯಲ್ಲಿ 136 ಪರಿ ಭತ್ತವನ್ನು 1 ಗಾಡಿ ಎಂದರೆ 15 ಬಟ್ಟಿ ಭತ್ತ ಎಂದು ಅಳೆದು ತೆಗೆದದ್ದನ್ನು ತಿಳಿದು ಪಂಚಾಯಿತ್ತಿಕ್ಕೆಯಿಂದ 136 ಪರಿ ಭತ್ತದ ಕ್ರಯವನ್ನು ಕೊಡಿಸಿದ್ದರಿಂದಲೇ ತಿಳಿಯುದ ರೈತರಾಗಿ ನಾನು ಬಾತ್ಮಿ ಬರೆದದಲ್ಲದೆ ನಿಮ್ಮಂಥಾ "ತಿಳಿದ ರೈತ" ಸರ್ವಜ್ಞ ಮೂರ್ತಿಗೆ ಬರೆದದ್ದಲ್ಲ. ಒಂದು ಗಾಡ್ಡಿ ಎಂದರೆ ಭತ್ತದ ಲೆಕ್ಕದಲ್ಲಿ 15 ಬಟ್ಟಿ ಭತ್ತ ಎಂದರ್ಥ. ಒಂದು ಬಟ್ಟಿ ಎಂದರೆ ಕುಕ್ಕೆಯಲ್ಲ. ನೀವು ಹೇಳುವಂತೆ 17—18 ಬಟ್ಟಿ ಎಂದರೆ 1 ಗಾಡಿಯೊಗಲಿಕ್ಕಿಲ್ಲ. ರಸ್ತೆಗಳೂ ಭತ್ತದ ವ್ಯಾಪಾರವು ಹೆಚ್ಚಿದ ವೇಲೆ ಗಾಡಿ ಎಂಬದ್ದು ಬಂತು. ಅದಕ್ಕೆ ಮೊದಲು ಸೇರು ಕೂಟಗಳೂ ಪರಿ ಮತ್ತು ಬಟ್ಟಿ ಮೂತ್ಯ ಕೊಡಗಿನ ಅಳತೆಯ ಸಾಮಾನ್ಯ ಮತ್ತು ಲೆಕ್ಕ.

ನೀವು ಹೇಳಿದಂತೆ ಲಾರಿ ನಿರಖು ಮಾಡಲು ಕ್ರಮೇಣ ಗಾಡಿ ವೈವಾಟು ನಿಂತು ಹೋಗಿ ಲಾರಿಯೇ ಆಗಿ ಭತ್ತ ಗಾಡಿ 1 ಕ್ಕೆ ಎಷ್ಟು ಬೆಲೆ ಎಂದು ಕೇಳುವದರ ಬದಲು ಭತ್ತ ಲಾರಿ 1 ಕ್ಕೆ ಬೆಲೆ ಕೇಳುವಾಗ ಲಾರಿ ನಿರಖು ಆದರೆ ಭತ್ತ ಲಾರಿ 1ಕ್ಕೆ ಎಷ್ಟು ಬಟ್ಟಿ ಎಂಬದ್ದು ಒಂದು ನಿರಖಿಗೆ ತನ್ನಷ್ಟಕ್ಕೆ ತಾನೇ ಬರುವಂದು ಸೋಜಿಗವಲ್ಲ.

ಇನ್ನು ಪರಿಯನ್ನು ಅಳತೆ ಅಳ್ಳಾಡಿಸಲು ವ್ಯಾಪಾರಿಗಳಿಗೆ ಬಿಡವೆ ಅಂಗಡಿ ವ್ಯಾಪಾರಿಗಳು ಅವರ ದಿನಸನ್ನು ಅವರೇ ಅಳತೆಮಾಡಿ ಕೊಡುವಂತೆ ನೀವು ಸಹ ನಿಮ್ಮ ಭತ್ತವನ್ನು ಲಾರಿಯಿತ್ತಿನಿಂದಲೇ ನೀವೇ ನಿನ್ನ ಸ್ವಂತ 10 ಸೇರಿನ ಪರಿಯಲ್ಲೇ ಅಳೆದುಕೊಡುತ್ತಿದ್ದ ನಿಮ್ಮ ಹೆಸರನ್ನು "ತಿಳಿದ ರೈತ" ಎಂದು ಬರಿಯುವದರ ಬದಲು ನಿಮ್ಮ ನಿಜ ಹೆಸರನ್ನು ತಿಳಿಸಿದ್ದ ಪಕ್ಷ ತನ್ನ ಭತ್ತವನ್ನು ತನ್ನ ಪರಿಯಲ್ಲಿ ತಾನೇ ಅಳೆದು ಕೊಡುವ ಕಷ್ಟಗಾರ ಕೊಡಗು ರೈತನೊಬ್ಬನಿರುವದು ತಿಳಿದು ನಿಮ್ಮನ್ನು ಹಡೆದ ಕೊಡಗು ಮಾತೆಯನ್ನು "ಧನ್ಯೆ" ಎಂದು ಜಯಕಾರ ಮಾಡುತ್ತಿದ್ದೆನು. ಇನ್ನಾದರೂ ತಡಮೆಂದೆಣಿಸದೆ ನಿಮ್ಮ ನಿಜ ಹೆಸರನ್ನು ತಿಳಿಸಬೇಕಾಗಿ ಕೋರುವ.

ಐ. ಪಿ. ಮೂದಪ್ಪ.

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅ ಜ ವಿ ರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ವಾಮಾನದ ಶೇಕಡ
1911	46,248	49,442	82.9
1921	2,92,627	6,53,350	43 2
1931	12,50,000	40,00,000	28.2

ಬೋನಸ್ಸು.

ಕುರ್ತು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 2½

ಚೆನ್ನಾಗಿ ಕೆಲಸವೂಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ಏಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸವೂಡಿ ಉತ್ತಮ ಕಮಿಷನ್ ದರದ ಪ್ರಯೋಜನೆ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಒಳ,
ಬೆಂಗಳೂರು.

52—46

Wanted.

Assets 17500000 Exeeeds.	Pre—Income 33 Lacks.

Realy Capable and Influential **Special Agent** having organising Capacity either on commission basis or salary for the NATIONAL INSURANCE CO., LTD., Calcutta. (Est. 1906.)

Please apply to—

CHIEF ORGANISER,
National Insurance Co., Ltd.,
Arcot Srinivas Char St.,
12—12 Bangalore City.

---

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕ ಕಂಪನಿ ೧೭೮೩

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
(52—30) ಮತ್ತು ಕಂಪನಿ,
ಗಿರಗಾಂವ, ಮುಂಬಯಿ,

FREE INSURANCE.

ಜೈಭಾರತ ಇನ್‌ಶ್ಯೂರೆನ್ಸ್ ಕಂಪನಿ, ಲಿಮಿಟೆಡ್,

ಹೆಡ್ ಆಫೀಸು—ಮದ್ರಾಸು.

ಲೈಫ್ ಇನ್‌ಶ್ಯೂರೆನ್ಸ್ ಕಂಪನಿಗಳ ಖಾನೂನಿಗೆ ಅಧೀನವಾಗಿದೆ.
ಸರಕಾರದಲ್ಲಿ ಠೇವಣಾತಿ ಇಡಲಾಗಿದೆ.

ಭರತ ಖಂಡದ ಪ್ರಜೆಗಳಲ್ಲಿ ಹೆಚ್ಚು ಮಂದಿ ದರಿದ್ರರೆಂಬುದು ಸರ್ವ ವಿದಿತವಾಗಿದೆ. ಜೀವ ವಿಮೆಯು ಉಪಕಾರಿಯೂಗಿ ಪರಿಣಮಿಸುವುದು. ಇಂಥವರಿಗೆ ಅಲ್ಲದೆ ಶ್ರೀಮಂತರಿಗಲ್ಲ. ಬಡವರೂ ಮಧ್ಯಮ ತರಗತಿಯ ಮಿತ ಸಂಪಾದನೆಯುವರೂ, ಇನ್‌ಶ್ಯೂರೆನ್ಸ್ ಕಂಪನಿಗಳ ದುಬಾರಿಕಂತುಗಳನ್ನು ಕಟ್ಟಲು ಅಶಕ್ತರಾಗಿರುವದರಿಂದ ಅಂಥವರು ಜೀವವಿಮೆಯ ಉಚ್ಚ ಫಲಾನುಭವವನ್ನು ಹೊಂದುವ ಸುಯೋಗವನ್ನು ಕಳೆದುಕೊಂಡಿದ್ದಾರೆ. ಆದುದರಿಂದ ಭರತಖಂಡದ ಈಗಿನ ಉತ್ಪತಿಗೂಪಪರಸ್ಥಿತಿಗೂ ಸಮೂಜಕೋರಿಕೆಗೂನ್ನು ಅನುಕೂಲಿಸುವಂತಹ ವಿಮ್ಮು ಶಾಶ್ವತವೂ ಸರ್ವ ಪ್ರಕಾರದಿಂದಲೂ ಭದ್ರವೂ ಆದ ಜೀವ ವಿಮೆಯ ಕಂಪನಿಗೆ ಅತ್ಯವಶ್ಯಕವಿವೆ.

ಈ ವಿಮೆಯ ಕಂಪನಿಯು 1931ನೇ ಫೆಬ್ರವರಿ ತಿಂಗಳಲ್ಲು ಸ್ಥಾಪಿತವಾಗಿ ಈಗ 30,000ಕ್ಕೂ ಹೆಚ್ಚಾಗಿ ಪಾಲಿಸಿದಾರರನ್ನು ಪಡೆದಿರುತ್ತೆ. ಇದಕ್ಕೆ 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಜಾತಿ ಮತಗಳ ಬೇಧವಿಲ್ಲದೆ ಹೆಂಗಸರೂ ಗಂಡಸರೂ ಹೆಚ್ಚು ರುಸುಂ ಕೊಡಬೆಯೇ ಉಚಿತ ವಿಮೆ ಮಾಡಿಕೊಳ್ಳಬಹುದು. ಆದ್ದರಿಂದ ಇಂಥಾ ಸುಸಮಯವನ್ನು ಕಳೆದುಕೊಳ್ಳಬೇಡಿ. ಈ ದಿನವೇ ಪಾಲಿಸಿದಾರರಾಗಿ ಫಲವನ್ನು ಹೊಂದಲು ಬಾಗಿಗಳಾಗಿರಿ.

ಹೆಚ್ಚಿನ ಯಾವ ಮಾಹಿತಿಗಳಿಗೂ ಈ ಕೆಳಗಿನ ವರಲ್ಲಿ ವಿಚಾರಿಸಿರಿ. ಅಲ್ಲದೆ ಇವರು ಕೊಡಗಿನ ಎಲ್ಲಾ ಕಡೆಗಳಲ್ಲೂ ತಿರುಗತಲ್ಲಿರುತ್ತಾರೆ.

ಎನ್. ಬಿ. ಕರುಂಬಯ್ಯ,
ಏಜೆಂಟ್,
ಜೈಭಾರತ ಇನ್‌ಶ್ಯೂರೆನ್ಸ್ ಕಂಪನಿ, ಲಿಮಿಟೆಡ್,
12—3 ನಾಪೋಕ್ಲು (ಕೊಡಗು).

ಇಂಡಿಯಾ ಎಕ್ಸ್‌ಟೇಬಲ್ ಕಂಪನಿ ಲಿಮಿಟೆಡ್

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 96.6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ದಾಮುಶಾಯಿ 31% ಮಾತ್ರ.

ಇಂಡಿಯಾ ಎಕ್ಸ್‌ಟೇಬಲ್ ಇನ್ಶೂರೆನ್ಸ್ ಕಂಪನಿಯು ಬುಡದಿಂದ ತಲೆಯ ವರೆಗೂ ಇಂಡಿಯನೇ.

ವಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಚಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ ಸಿ. ಯಂ. ಪೂವಯ್ಯ,
ಲೇಡಿ ಆರ್ಗನೈಜರ್,
'ಪೂವಯ್ಯ ವಿಲ್ಲ,'
(12—15) ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟಯರ್ಡ್ ವಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ

ಮೈಸೂರು ಸ್ಯಾಂಡಲ್ ಸಾಬೂನಿನಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.
ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
52—26 ಬೆಂಗಳೂರು.

...ಂಕ್,
ಸೂಸೈಟೀಸ್
...ರಾಗಿಸಿ.
...1922ರಲ್ಲು)

ರೂ.

...ಡವಾಳ — 50,000— 0—0
...ಲಾದ ಶೇರ್ ಮೊಬಲಗು — 27,950— 0—0
ಜಮೂಬಂದ ಶೇವಣಾತಿ — 22,8525—10—8
ವಸೂಲಾದ ಕ್ಷೇಮನಿಧಿ — 48,840— 3—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಶೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಶೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಲ ಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪೈಸಿಡೆಂಟರು,
ಪಟ್ಟವಾಡ ದೇವೈಯ್ಯನವರು,
ಶಾವ್ ಬಹದ್ದೂರ್.

ಟ್ರೆಜರರ್
ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಮನೆಯಪಂಡ ಯಂ. ಬೆಳ್ಯಪ್ಪನವರು.

ತಾರೀಕು 1—1—1933.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರಪರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ಪಯಎಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಪೆ. ಚೌರಿರ ಮಾಚ್ಚಿಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮೆಯ್ಯನವರು, (ಖಾದಿಭಂಡಾರ.)

ಶಿಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೊಡಪ್ಪನವರು,

ನೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಮ್ಮೆಯ್ಯನವರು, ಮತ್ತು ಆರಮಣಮೂಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ. ಜಿ. ಮೂಡಮ್ಮೆಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೊಚ್ಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮೊರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಯಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವತಿ ಫಾರಮುಗಳೂ, ಪರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಪರಾರು ಫಾರಮುಗಳೂ, ಸ್ಟೋರ್ ಕೀಪರ್ ಪರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮೂ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮೊಡಿರುವ 1,78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಎಂರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖ್ಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ರೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೌ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಡಲೆ	ರಾಯಿಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ [52—9

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಿಗಾಂವ, ಮುಂಬಯಿ.
52—9

EMPIRE OF INDIA
Life Assurance Company, Limited.

Established 1897.

INTERIM BONUS on Policies becoming claims before 1st March 1934 INCREASED TO

Rs. 16 per annum per Rs. 1000/— Assured on Whole Life Assurances.

and

Rs. 14 per annum per Rs. 1000/— Assured on Endowment Assurances

Head Office:—
EMPIRE OF INDIA LIFE BUILDING,
Bombay

52—23

Branch Office:—
152/3, COMMERCIAL STREET,
Bangalore.